# www.karunaduexams.com

## ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್- ಸೆಪ್ಟೆಂಬರ್, 2017

www.karunaduexams.com

**ಹೆಚ್ಚಿನ ಮಾಹಿತಿಗಾಗಿ,**

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ,

WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mohan Kumar: Mobile: +91- 98805 33259 (Content related queries)

Chandrashekhar Nayak: Mobile: +91-9448880551 / 9844915689 (Technical and Marketing related queries)

Ramakant: Mobile: +91-9972355744(Management related queries)

www.karunaduexams.com

1. 2017 ಅಂತಾರಾಷ್ಟ್ರೀಯ ಹಿಂದೂ ಸಮ್ಮೇಳನ ಯಾವ ದೇಶದಲ್ಲಿ ನಡೆಯಿತು?

ಅ) ನೇಪಾಳ

ಆ) ಮಾರಿಷಸ್

ಇ) ಶ್ರೀಲಂಕಾ

ಈ) ಭಾರತ

ನೇಪಾಳ

2017 ಅಂತಾರಾಷ್ಟ್ರೀಯ ಹಿಂದೂ ಸಮ್ಮೇಳನ 3 ದಿನಗಳ ಕಾಲ ನೇಪಾಳದ ಕಠ್ಮಂಡುವಿನಲ್ಲಿ ನಡೆಯಿತು. 'Emerging spiritualism: Renaissance of Hinduism' ಇದು ಈ ವರ್ಷದ ಥೀಮ್. ಕಠ್ಮಂಡುವನ್ನು ಜಾಗತಿಕ ಹಿಂದೂ ರಾಜಧಾನಿಯನ್ನಾಗಿ ಮಾಡುವುದು ಸಮ್ಮೇಳನದ ಗುರಿ ಆಗಿತ್ತು. ಭಾರತ, ಬಾಂಗ್ಲಾದೇಶ, ಪಾಕಿಸ್ತಾನ, ಯುಎಸ್ ಮತ್ತು ಯುಕೆ ಸೇರಿದಂತೆ ವಿವಿಧ ದೇಶಗಳ ಸುಮಾರು 500 ಹಿಂದೂ ವಿದ್ವಾಂಸರು, ಧಾರ್ಮಿಕ ನಾಯಕರು, ಹಿಂದೂ ಕಾರ್ಯಕರ್ತರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

2. ಈ ಕೆಳಗಿನ ಯಾರು "ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ (ಸಿಬಿಎಸ್ಇ)" ನ ಹೊಸ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ?

ಅ) ಅನಿತ ಕಾರ್ವಾಲ್

ಆ) ಶುಭ ಕಿರಣ್

ಇ) ಡೇವಿಡ್ ಮ್ಯಾಥು

ಈ) ಸುರೇಶ್ ಚಂದ್ರ

ಅನಿತ ಕಾರ್ವಾಲ್

ಗುಜರಾತ್-ಕೇಡರ್ ಐಎಎಸ್ ಅಧಿಕಾರಿ ಅನಿತಾ ಕಾರ್ವಾಲ್ ಅವರು ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ (ಸಿಬಿಎಸ್ಇ)ನ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಪ್ರಸ್ತುತ, ಇವರು ಮಾನವ ಸಂಪನ್ಮೂಲ ಅಭಿವೃದ್ದಿ ಸಚಿವಾಲಯದಲ್ಲಿ ಹೆಚ್ಚುವರಿ ಕಾರ್ಯದರ್ಶಿ (ಮಾನವ ಸಂಪನ್ಮೂಲ) ಆಗಿದ್ದಾರೆ.

3. ಬಾಂಡ್ಲಾ ವನ್ಯಜೀವಿ ಧಾಮ (Bondla Wildlife Sanctuary) ಯಾವ ರಾಜ್ಯದಲ್ಲಿದೆ?

ಅ) ಗೋವಾ

ಆ) ತಮಿಳುನಾಡು

ಇ) ಗುಜರಾತ್

ಈ) ಅಸ್ಸಾಂ

ಗೋವಾ

www.karunaduexams.com

4. ಈ ಕೆಳಗಿನ ಯಾವ ನಗರದಲ್ಲಿ ಬ್ರಿಕ್ಸ್-2017 ಶೃಂಗಸಭೆ ನಡೆಯಲಿದೆ?

ಅ) ಮಾಸ್ಕೋ

ಆ) ಬೀಜಿಂಗ್

ಇ) ಕ್ಸಿಯಾಮೆನ್

ಈ) ಬ್ರಸಿಲಿಯ

ಕ್ಸಿಯಾಮೆನ್

ಬ್ರಿಕ್ಸ್ ಶೃಂಗಸಭೆಯ 9ನೇ ಆವೃತ್ತಿ ಸೆಪ್ಟೆಂಬರ್ 3, 2017 ರಂದು ಪೂರ್ವ ಚೀನಾದ ಫುಜಿಯನ್ ಪ್ರಾಂತ್ಯದ ಕ್ಸಿಯಾಮೆನ್ ನಲ್ಲಿ ನಡೆಯಲಿದೆ. "BRICS: ಪ್ರಕಾಶಮಾನವಾದ ಮುಂದಿನ ಭವಿಷ್ಯಕ್ಕಾಗಿ ಬಲವಾದ ಪಾಲುದಾರಿಕೆ ("BRICS: Stronger Partnership for a Brighter Future")" ಇದು ಈ ಶೃಂಗಸಭೆಯ ಧ್ಯೇಯವಾಕ್ಯ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಈ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

5. ಸಿಂಗಪುರದ ಹಂಗಾಮಿ ಅಧ್ಯಕ್ಷರಾಗಿ ಆಯ್ಕೆಯಾದ ಭಾರತೀಯ ಮೂಲದ ವ್ಯಕ್ತಿ ಯಾರು?

ಅ) ಸೀತಾರಾಮನ್

ಆ) ಜೆ. ವೈ. ಪಿಳ್ಳೈ

ಇ) ಕೆ. ಪಿ. ಶರ್ಮಾ

ಈ) ಆರ್ ವಿ ಸಿಂಗ್

ಜೆ. ವೈ. ಪಿಳ್ಳೈ

ಭಾರತೀಯ ಮೂಲದ ಜೆ.ಪಿ ಪಿಳ್ಳೈ ರವರು ಸಿಂಗಪುರದ ಹಂಗಾಮಿ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಅವರು ಟೋನಿ ಟಾನ್ ಕೆಂಗ್ ಯಾಮ್ ರವರ ಆರು ವರ್ಷಗಳ ಅಧಿಕಾರ ಅವಧಿ ಮುಕ್ತಾಯವಾದ ಹಿನ್ನಲೆಯಲ್ಲಿ ಪಿಳ್ಳೈ ರವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

www.karunaduexams.com

6. ಯುನೆಸ್ಕೋದ ಪ್ರತಿಷ್ಠಿತ ವಿಶ್ವ ಪರಂಪರೆ ನಗರಗಳ ಪಟ್ಟಿಗೆ ಸೇರ್ಪಡೆಗೊಂಡ ಭಾರತದ ಮೊದಲ ನಗರ ಎಂಬ ಕೀರ್ತಿಗೆ ಯಾವ ನಗರ ಭಾಜನವಾಗಿದೆ?

ಅ) ಅಹ್ಮದಾಬಾದ್

ಆ) ಹಂಪಿ

ಇ) ಮೈಸೂರು

ಈ) ಕೊಲ್ಕತ್ತ

ಅಹ್ಮದಾಬಾದ್

ಗುಜರಾತಿನ ಅಹ್ಮದಾಬಾದ್ ನಗರವನ್ನು ಪ್ರತಿಷ್ಠಿತ ವಿಶ್ವ ಪರಂಪರೆ ನಗರಗಳ ಪಟ್ಟಿಗೆ ಸೇರಿಸಲಾಗಿದ್ದು,ಈ ಪಟ್ಟಿಗೆ ಸೇರಿದ ಭಾರತದ ಮೊದಲ ನಗರ ಎಂಬ ಕೀರ್ತಿಗೆ ಅಹ್ಮದಾಬಾದ್ ಭಾಜನವಾಗಿದೆ. ಪೋಲ್ಯಾಂಡ್ ನ ಕಾರ್ಲೋದಲ್ಲಿ ನಡೆದ ಯುನೆಸ್ಕೋದ ವಿಶ್ವ ಪರಂಪರೆ ಸಮಿತಿ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ. ವಿಶ್ವ ಪರಂಪರೆ ನಗರಗಳ ಪಟ್ಟಿಯಲ್ಲಿ ಈಗಾಗಲೇ ಪ್ಯಾರಿಸ್, ವಿಯೆನ್ನಾ, ಕೈರೋ, ಬ್ರುಸೆಲ್ಸ್, ರೋಮ್ ಮತ್ತು ಎಡಿನ್ಬರ್ಗ್ ನಗರಗಳಿದ್ದು, ಇದೀಗ ಗುಜರಾತ್ ನ ಐತಿಹಾಸಿಕ ಗೋಡೆ ನಗರಿ ಕೂಡ ಸೇರ್ಪಡೆಯಾಗುತ್ತಿರುವುದು ಭಾರತದ ಮಟ್ಟಿಗೆ ಹೆಮ್ಮೆಯ ಸಂಗತಿಯಾಗಿದೆ. ಇನ್ನು ನೇಪಾಳದ ಭಕ್ತಪುರ ಮತ್ತು ಶ್ರೀಲಂಕಾದ ಗಾಲೆ ಕೂಡ ವಿಶ್ವಪರಂಪರೆ ನಗರಗಳ ಪಟ್ಟಿಗೆ ಸೇರ್ಪಡೆಯಾಗಿದೆ.

7. ಭಾರತದ ನೂತನ ರಕ್ಷಣಾ ಸಚಿವರಾಗಿ ನೇಮಕಗೊಂಡಿರುವ ನಿರ್ಮಲಾ ಸೀತಾರಾಮನ್ ರವರು ಯಾವ ರಾಜ್ಯದಿಂದ ರಾಜ್ಯಸಭೆಯನ್ನು ಪ್ರತಿನಿಧಿಸಿದ್ದಾರೆ?

ಅ) ಮಧ್ಯ ಪ್ರದೇಶ

ಆ) ಕರ್ನಾಟಕ

ಇ) ತೆಲಂಗಣ

ಈ) ತಮಿಳುನಾಡು

ಕರ್ನಾಟಕ

'ನಿರ್ಮಲಾ ಸೀತಾರಾಮನ್' ರವರು ಭಾರತದ ನೂತನ ರಕ್ಷಣಾ ಮಂತ್ರಿಯಾಗಿ ನೇಮಕಗೊಂಡಿದ್ದಾರೆ. ಸೀತಾರಾಮನ್ ರವರು ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಅವರು ಕರ್ನಾಟಕದಿಂದ ರಾಜ್ಯಸಭೆಗೆ ಚುನಾಯಿತರಾಗಿದ್ದಾರೆ. ಸೀತಾರಾಮನ್ ರವರು ದೇಶದ ಮೊದಲ ಮಹಿಳಾ ರಕ್ಷಣಾ ಸಚಿವರು.

www.karunaduexams.com

8. ಮಹೇಂದ್ರ ಸಿಂಗ್ ಧೋನಿ ರವರು 100 ಸ್ಟಂಪ್ ಮಾಡಿದ ವಿಶ್ವದ ಏಕೈಕ ಆಟಗಾರ ಎಂಬ ದಾಖಲೆ ಬರೆದರು. ಯಾವ ತಂಡದ ವಿರುದ್ಧ ನಡೆದ ಪಂದ್ಯದಲ್ಲಿ ಈ ಸಾಧನೆ ಮಾಡಲಾಯಿತು?

ಅ) ವೆಸ್ಟ್ ಇಂಡೀಸ್

ಆ) ಇಂಗ್ಲೆಂಡ್

ಇ) ಶ್ರೀಲಂಕಾ

ಈ) ಆಸ್ಟ್ರೇಲಿಯಾ

ಶ್ರೀಲಂಕಾ

ಲಂಕಾ ವಿರುದ್ಧ ನಡೆದ ಕೊನೆ ಏಕದಿನ ಪಂದ್ಯದಲ್ಲಿ ಚಾಹಲ್ ಬೌಲಿಂಗ್‌ನಲ್ಲಿ ಅಕಿಲಾ ಧನಂಜಯ್ ಅವರ ವಿಕೆಟ್ ಸ್ಟಂಪಿಂಗ್ ಮಾಡುವ ಮೂಲಕ 100 ಸ್ಟಂಪ್ ಮಾಡಿದ ಏಕೈಕ ವಿಕೆಟ್ ಕೀಪರ್ ಎಂಬ ಖ್ಯಾತಿಗೆ ಎಂ. ಎಸ್. ಧೋನಿ ಪಾತ್ರರಾಗಿದ್ದಾರೆ.

9. 2017 ಇಟಾಲಿಯನ್ ಫಾರ್ಮ್ಯುಲಾ ಒನ್ ಗ್ರ್ಯಾಂಡ್ ಪ್ರಿಕ್ಸ್ ಪಂದ್ಯಾವಳಿಯಲ್ಲಿ ಪ್ರಶಸ್ತಿಯನ್ನು ಗೆದ್ದವರು ಯಾರು?

ಅ) ಸೆಬಾಸ್ಟಿಯನ್ ವೆಟಲ್

ಆ) ಲೇವಿಸ್ ಹ್ಯಾಮಿಲ್ಟನ್

ಇ) ಡೆನಿಯಲ್ ರಿಕ್ಕಿಯಾರ್ಡೊ

ಈ) ನಿಕೊ ರೋಸ್ಬರ್ಗ್

ಲೇವಿಸ್ ಹ್ಯಾಮಿಲ್ಟನ್

10. ಈ ಕೆಳಗಿನ ಯಾರು ಭಾರತಕ್ಕೆ ಅಮೆರಿಕ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ?

ಅ) ಡೇವಿಡ್ ಸ್ಮಿತ್

ಆ) ಕೆನ್ನೆತ್ ಜಸ್ಟರ್

ಇ) ರಿಚರ್ಡ್ ವರ್ಮಾ

ಈ) ಹ್ಯಾರೀಸ್ ಜೇಮ್ಸ್

ಕೆನ್ನೆತ್ ಜಸ್ಟರ್

ಕೆನ್ನೆತ್ ಐ ಜಸ್ಟರ್ ಭಾರತಕ್ಕೆ ಅಮೆರಿಕ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಕೆನ್ನೆತ್ ರವರು ಶ್ವೇತಭವನದಲ್ಲಿ ನ್ಯಾಷನಲ್ ಇಕನಾಮಿಕ್ ಕೌನ್ಸಿಲ್‌ನ ಉಪನಿರ್ದೇಶಕರಾಗಿದ್ದಾರೆ. ಜನವರಿ 20, 2017 ರಿಂದ ಈ ಹುದ್ದೆ ತೆರವಾಗಿದೆ. ಜಸ್ಟರ್ ಭಾರತ-ಯುಎಸ್ ಸಂಬಂಧಗಳ ಬಲವಾದ ಬೆಂಬಲಿಗರಾಗಿದ್ದಾರೆ ಮತ್ತು ನಾಗರಿಕ ಪರಮಾಣು ಒಪ್ಪಂದದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

www.karunaduexams.com

11. ಈ ಕೆಳಗಿನ ಯಾವ ಸಂಸ್ಥೆ 2018-23 ಐಪಿಲ್ ಪ್ರಸಾರ ಹಕ್ಕನ್ನು ಪಡೆದುಕೊಂಡಿದೆ?

ಅ) ಸ್ಟಾರ್ ಇಂಡಿಯಾ

ಆ) ಸೋನಿ

ಇ) ಟೆನ್ ಸ್ಪೋರ್ಟ್ಸ್

ಈ) ರಿಲಾಯನ್ಸ್ ಜಿಯೊ

ಸ್ಟಾರ್ ಇಂಡಿಯಾ

2018-23 ಐಪಿಎಲ್ ಪ್ರಸಾರ ಹಕ್ಕಿನ ಜವಾಬ್ದಾರಿಯನ್ನು ಸ್ಟಾರ್ ಇಂಡಿಯಾ ಪಾಲಾಗಿದೆ. ಮುಂದಿನ 5 ವರ್ಷಗಳ ಪ್ರಸಾರದ ಹಕ್ಕಿಗಾಗಿ ಸ್ಟಾರ್ ಇಂಡಿಯಾವು 16,347.50 ರೂ.ಗಳನ್ನು ವ್ಯಯಿಸಿ ಡಿಜಿಟಲ್ ಹಾಗೂ ವಿಶ್ವದಾದ್ಯಂತ ಪ್ರಸಾರ ಮಾಡುವ ಹಕ್ಕನ್ನು ಪಡೆದುಕೊಂಡಿದೆ.

12. ದ್ವೈವಾರ್ಷಿಕ ಜಂಟಿ ಕಡಲ ನೌಕಾಪಡೆ ಅಭ್ಯಾಸ "SLINEX 2017" ಭಾರತ ಮತ್ತು ಯಾವ ದೇಶದ ನಡುವೆ ನಡೆಯಲಿದೆ?

ಅ) ಚೀನಾ

ಆ) ಸಿಂಗಪುರ

ಇ) ಶ್ರೀಲಂಕಾ

ಈ) ಇಂಡೋನೇಷಿಯಾ

ಶ್ರೀಲಂಕಾ

ದ್ವೈವಾರ್ಷಿಕ ಭಾರತ ಮತ್ತು ಶ್ರೀಲಂಕಾ ನಡುವಿನ ಕಡಲ ನೌಕಪಡೆ ಅಭ್ಯಾಸ “SLINEX 2017” ಸೆಪ್ಟೆಂಬರ್ 7 ರಿಂದ 14 ರವರೆಗೆ ನಡೆಯಲಿದೆ. ಸರಿ ಸುಮಾರು 368 ಶ್ರೀಲಂಕಾದ ನೌಕಾಪಡೆಯ ಸಿಬ್ಬಂದಿಗಳು ಈ ವ್ಯಾಯಾಮದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಶ್ರೀಲಂಕಾ ನೌಕಾಪಡೆಯ ಕಡಲಾಚೆಯ ಗಸ್ತು ಹಡಗುಗಳು, ಎಸ್ಎಲ್ಎನ್ಎಸ್ ಸಯುರ ಮತ್ತು ಸಾಗರ ಈ ವ್ಯಾಯಾಮದಲ್ಲಿ ಪಾಲ್ಗೊಳ್ಳಲು ವಿಶಾಖಪಟ್ಟಣದ ಬಂದರಿಗೆ ಆಗಮಿಸಿವೆ.

13. ಕೆಳಗಿನ ಯಾವ ವಿಮಾನ ನಿಲ್ದಾಣ ಇಂಧನ ನಿರ್ವಹಣೆಗಾಗಿ ರಾಷ್ಟ್ರೀಯ “ಉತ್ಕೃಷ್ಟತ” ಪ್ರಶಸ್ತಿ ಪಡೆದುಕೊಂಡಿದೆ?

ಅ) ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಆ) ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಇ) ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಈ) ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ರಾಜೀವ್ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಇಂಧನ ನಿರ್ವಹಣೆಗಾಗಿ ರಾಷ್ಟ್ರೀಯ ಉತ್ಕೃಷ್ಟತೆ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಕಾನ್ಫರೆನ್ಸ್ ಆಫ್ ಇಂಡಿಯನ್

www.karunaduexams.com

ಇಂಡಸ್ಟ್ರಿ (ಸಿಐಐ) ಆಯೋಜಿಸಿದ್ದ ಸಮಾವೇಶದಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ಇಂಧನ ಸಂರಕ್ಷಣೆ ಕಡೆಗೆ ಬದ್ಧತೆಯನ್ನು ಪ್ರದರ್ಶಿಸುವ ಮೂಲಕ ತಮ್ಮ ದೈನಂದಿನ ಕಾರ್ಯಾಚರಣೆಗಳಲ್ಲಿ ಉತ್ತಮ ಅಭ್ಯಾಸಗಳನ್ನು ಮತ್ತು ತಾಂತ್ರಿಕ ಪ್ರಗತಿಯನ್ನು ಅಳವಡಿಸಿಕೊಳ್ಳುವ ಮೂಲಕ ಇಂಧನ ದಕ್ಷತೆಯ ಉಪಕ್ರಮಗಳಲ್ಲಿ ತೊಡಗಿರುವ ಕಂಪೆನಿಗಳನ್ನು ಗುರುತಿಸಲು ಈ ಸಮಾವೇಶವನ್ನು ಆಯೋಜಿಸಲಾಗುತ್ತದೆ.

14. ಈ ಕೆಳಗಿನ ಯಾವ ರಾಜ್ಯದಲ್ಲಿ "ಜಲ್ದಪರ ರಾಷ್ಟ್ರೀಯ ಉದ್ಯಾನವನ" ಇದೆ?

ಅ) ಒಡಿಶಾ

ಆ) ಪಶ್ಚಿಮ ಬಂಗಾಳ

ಇ) ಸಿಕ್ಕಿಂ

ಈ) ಅಸ್ಸಾಂ

ಪಶ್ಚಿಮ ಬಂಗಾಳ

ಉತ್ತರ ಪಶ್ಚಿಮ ಬಂಗಾಳದ ಅಲಿಪುರ್ದಾರ್ ಜಿಲ್ಲೆಯ ಟೋರ್ಸಾ ನದಿಯ ದಂಡೆಯ ಮೇಲೆ ಜಲ್ದಪರ ರಾಷ್ಟ್ರೀಯ ಉದ್ಯಾನವನ ನೆಲೆಗೊಂಡಿದೆ. ಇದು ಚಿರತೆ, ಆನೆ, ಸಾಂಬಾರ್, ಬಾರ್ಕಿಂಗ್ ಜಿಂಕೆ, ಮಚ್ಚೆಯುಳ್ಳ ಜಿಂಕೆ, ಮುಂತಾದ ವನ್ಯಜೀವಿಗಳಿಗೆ ಆಶ್ರಯ ಒದಗಿಸಿದೆ.

15. ಜಾಗತಿಕ ನಾಯಕತ್ವಕ್ಕಾಗಿ "ಪ್ಲಸ್ ಅಲೆಯನ್ಸ್ ಪ್ರಶಸ್ತಿ"ಯನ್ನು ಯಾರಿಗೆ ನೀಡಲಾಗಿದೆ?

ಅ) ಎನ್ ಆರ್ ನಾರಾಯಣ ಮೂರ್ತಿ

ಆ) ಅಜೀಂ ಪ್ರೇಮ್ ಜಿ

ಇ) ಮುಖೇಶ್ ಅಂಬಾನಿ

ಈ) ಅನಿಲ್ ಅಂಬಾನಿ

ಎನ್ ಆರ್ ನಾರಾಯಣ ಮೂರ್ತಿ

ಇನ್ಫೋಸಿಸ್ ಸಹ-ಸಂಸ್ಥಾಪಕ ಎನ್.ಆರ್.ನಾರಾಯಣ ಮೂರ್ತಿ ಮತ್ತು ಮುಂಬೈ ಮೂಲದ ವಿಜ್ಞಾನಿ ವೀಣಾ ಸಹಾಜ್ವಾಲಾ ಅವರಿಗೆ ಪ್ಲುಸ್ ಅಲೈಯನ್ಸ್ ಪ್ರಶಸ್ತಿಯನ್ನು ನೀಡಲಾಗಿದೆ. ಸಂಶೋಧನಾ ನಾವೀನ್ಯತೆ, ಶಿಕ್ಷಣ ನಾವೀನ್ಯತೆ, ಜಾಗತಿಕ ನಾಯಕತ್ವವನ್ನು ಗುರುತಿಸುವ ಪ್ರತಿಷ್ಠಿತ ಗೌರವ ಪ್ರಶಸ್ತಿ ಇದಾಗಿದೆ. ಮೂರ್ತಿ ಅವರಿಗೆ ಜಾಗತಿಕ ನಾಯಕತ್ವಕ್ಕಾಗಿ ಪ್ಲುಸ್ ಅಲೈಯನ್ಸ್ ಪ್ರಶಸ್ತಿ ನೀಡಲಾದರೆ ವೀಣಾ ಸಹಾಜ್ವಾಲಾ ಅವರಿಗೆ ಶಿಕ್ಷಣ ನಾವೀನ್ಯತೆಗಾಗಿ ನೀಡಲಾಗಿದೆ.

www.karunaduexams.com

16. ರಾಷ್ಟ್ರೀಯ ಪೌಷ್ಠಿಕ ತಂತ್ರ (National Nutritional Strategy)ಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

i) ರಾಷ್ಟ್ರೀಯ ಪೌಷ್ಠಿಕ ತಂತ್ರವನ್ನು ನೀತಿ ಆಯೋಗ ಆರಂಭಿಸಿದೆ

II) ಹೈದ್ರಾಬಾದಿನಲ್ಲಿ ರಾಷ್ಟ್ರೀಯ ಪೌಷ್ಠಿಕ ತಂತ್ರಕ್ಕೆ ಚಾಲನೆ ನೀಡಲಾಯಿತು

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಹೇಳಿಕೆ ಒಂದು ಮಾತ್ರ

ನೀತಿ ಆಯೋಗ ಇತ್ತೀಚೆಗೆ ರಾಷ್ಟ್ರೀಯ ಪೌಷ್ಠಿಕ ತಂತ್ರಕ್ಕೆ ಹೊಸ ದೆಹಲಿಯಲ್ಲಿ ಚಾಲನೆ ನೀಡಿತು. ಅಪೌಷ್ಠಿಕ ಮುಕ್ತ ಭಾರತವನ್ನಾಗಿಸುವುದು ಇದರ ಪ್ರಮುಖ ಗುರಿ. ಹಸಿರು ಕ್ರಾಂತಿ ಪಿತಾಮಹ ಡಾ ಎಂ ಎಸ್ ಸ್ವಾಮಿನಾಥನ್ ಮತ್ತು ನೀತಿ ಆಯೋಗ ಉಪಾಧ್ಯಕ್ಷ ಡಾ. ರಾಜೀವ್ ಕುಮಾರ್ ಅವರು ರಾಷ್ಟ್ರೀಯ ಪೌಷ್ಠಿಕ ತಂತ್ರಕ್ಕೆ ಚಾಲನೆ ನೀಡಿದರು.

17. ಆಸ್ಟ್ರೇಲಿಯಾ ಪ್ರವಾಸೋದ್ಯಮಕ್ಕೆ ರಾಯಭಾರಿಯಾಗಿ ನೇಮಕಗೊಂಡಿರುವ ಬಾಲಿವುಡ್ ನಟಿ ಯಾರು?

ಅ) ಕತ್ರಿನಾ ಕೈಫ್

ಆ) ಪರಿನೀತಿ ಚೋಪ್ರಾ

ಇ) ಪ್ರಿಯಾಂಕ ಚೋಪ್ರಾ

ಈ) ಐಶ್ವರ್ಯ ರೈ

ಪರಿನೀತಿ ಚೋಪ್ರಾ

ಬಾಲಿವುಡ್ ನಟಿ ಪರಿನೀತಿ ಚೋಪ್ರಾ ರವರು ಆಸ್ಟ್ರೇಲಿಯಾ ಪ್ರವಾಸೋದ್ಯಮದ ಮೊದಲ ಭಾರತೀಯ ಮಹಿಳಾ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ.

18. ಯಾವ ದೇಶ 2019 ಕಾಮನ್ವೆಲ್ತ್ ವೇಟ್ ಲಿಫ್ಟಿಂಗ್ ಚಾಂಪಿಯನ್ಷಿಪ್ ಆಯೋಜಿಸಲಿದೆ?

ಅ) ಚೀನಾ

ಆ) ಭಾರತ

ಇ) ರಷ್ಯಾ

ಈ) ಮಲೇಷಿಯಾ

ಭಾರತ

www.karunaduexams.com

2019 ಕಾಮನ್ವೆಲ್ತ್ (ಯುವ, ಜೂನಿಯರ್ ಮತ್ತು ಹಿರಿಯ) ವೆಟ್ಲಿಫ್ಟಿಂಗ್ ಚಾಂಪಿಯನ್ಶಿಪ್ ಆತಿಥ್ಯವನ್ನು ಭಾರತ ವಹಿಸಲಿದೆ.

19. ಸೂರ್ಯನ ಬೆಳಕಿನಿಂದ ಇಂಧನವನ್ನು ಸೃಷ್ಟಿಸಲು ಕೃತಕ ಎಲೆಗಳನ್ನು ಅಭಿವೃದ್ಧಿಪಡಿಸಿದ ಭಾರತೀಯ ಸಂಸ್ಥೆ ಯಾವುದು?

ಅ) CSIR

ಆ) DRDO

ಇ) ISRO

ಈ) BHEL

CSIR

ಪುಣೆಯಲ್ಲಿನ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ ಸಂಶೋಧಕರು (ಸಿಎಸ್ಐಆರ್) ರಾಷ್ಟ್ರೀಯ ರಾಸಾಯನಿಕ ಪ್ರಯೋಗಾಲಯವು ಕೃತಕ ಎಲೆಗಳನ್ನು ಅಭಿವೃದ್ಧಿಪಡಿಸಿದೆ. ಇದು ಸೂರ್ಯನ ಬೆಳಕನ್ನು ಹೀರಿಕೊಂಡು ಜಲಜನಕ ಇಂಧನವನ್ನು ಸೃಷ್ಟಿಸಲಿದೆ. ಇದರಿಂದ ಭವಿಷ್ಯದಲ್ಲಿ ಪರಿಸರ ಸ್ನೇಹಿ ಕಾರುಗಳಿಗೆ ಇಂಧನ ದೊರಕುವುದು ಸುಲಭವಾಗಲಿದೆ.

20. ದೇಶದಲ್ಲಿ ಪ್ರಮುಖ ದತ್ತಾಂಶ ಸಂರಕ್ಷಣಾ ಸಮಸ್ಯೆಗಳನ್ನು ಗುರುತಿಸಲು ಕೇಂದ್ರ ಸರ್ಕಾರವು ಯಾವ ಪರಿಣಿತ ಸಮಿತಿಯನ್ನು ರಚಿಸಿದೆ?

ಅ) ಬಿ ಎನ್ ಕೃಷ್ಣ ಸಮಿತಿ

ಆ) ರಾಕೇಶ್ ಶರ್ಮಾ ಸಮಿತಿ

ಇ) ಅಮಿತ್ ಗುಪ್ತಾ ಸಮಿತಿ

ಈ) ನರೇಶ್ ಚಂದ್ರ ಸಮಿತಿ

ಬಿ ಎನ್ ಕೃಷ್ಣಾ ಸಮಿತಿ

ಸುಪ್ರೀಂಕೋರ್ಟ್ ಮಾಜಿ ನ್ಯಾಯಾಧೀಶ ಬಿ.ಎನ್.ಶ್ರೀಕೃಷ್ಣ ಅವರ ನೇತೃತ್ವದಲ್ಲಿ ಭಾರತದಲ್ಲಿ ಪ್ರಮುಖ ದತ್ತಾಂಶ ಸಂರಕ್ಷಣೆಯ ಸಮಸ್ಯೆಗಳನ್ನು ಗುರುತಿಸಲು ತಜ್ಞ ಸಮಿತಿ ರಚನೆಯಾಗಿದೆ ಎಂದು ಕೇಂದ್ರ ಸರ್ಕಾರ ಇತ್ತೀಚೆಗೆ ಸುಪ್ರೀಂ ಕೋರ್ಟ್ಗೆ ತಿಳಿಸಿದೆ. ಸಮಿತಿಯು ವರದಿಯನ್ನು ಸಲ್ಲಿಸಿದ ನಂತರ, ಮಾಹಿತಿ ಸಂರಕ್ಷಣೆಗೆ ಕಾನೂನು ರೂಪಿಸುವ ಸಾಧ್ಯತೆಯಿದೆ ಎಂದು ಸರಕಾರ ಸುಪ್ರೀಂ ಕೋರ್ಟ್ಗೆ ತಿಳಿಸಿದೆ.

www.karunaduexams.com

21. ಯಾವ ದೇಶವು ಈಸ್ಟರ್ನ್ ಎಕನಾಮಿಕ್ ಫೋರಮ್ (Eastern Economic Forum -2017) ಆಯೋಜಿಸುತ್ತಿದೆ?

ಅ) ಚೀನಾ

ಆ) ರಷ್ಯಾ

ಇ) ಜಪಾನ್

ಈ) ಪಾಕಿಸ್ತಾನ

ರಷ್ಯಾ

ಈಸ್ಟರ್ನ್ ಎಕನಾಮಿಕ್ ಫೋರಮ್ (ಇಇಎಫ್) ರಷ್ಯಾದ ವ್ಲಾಡಿವೋಸ್ಟಾಕ್‌ನಲ್ಲಿ ಸೆಪ್ಟೆಂಬರ್ 6-7, 2017 ರಂದು ಪ್ರಾರಂಭವಾಯಿತು. ಯುಎಸ್, ಜಪಾನ್, ಚೀನಾ, ಆಸ್ಟ್ರೇಲಿಯಾ, ಕೆನಡಾ, ಬ್ರಿಟನ್ ಸೇರಿದಂತೆ ಕನಿಷ್ಠ 24 ದೇಶಗಳ ಪ್ರತಿನಿಧಿಗಳು ಈ ಸಭೆಗೆ ಹಾಜರಾಗುತ್ತಿವೆ. ಭಾರತದಿಂದ ವಿದೇಶಾಂಗ ಸಚಿವ ಸುಷ್ಮಾ ಸ್ವರಾಜ್ ರವರು ಫೋರಂನಲ್ಲಿ ಭಾಗವಹಿಸಲಿದ್ದಾರೆ.

22. ಆಸ್ಟ್ರೇಲಿಯಾ ಬ್ಯಾಸ್ಕೆಟ್ ತಂಡಕ್ಕೆ ಆಯ್ಕೆಯಾದ ಮೊಟ್ಟ ಮೊದಲ ಭಾರತೀಯ ಆಟಗಾರ ಯಾರು?

ಅ) ಯಶ್ವಿಂದರ್ ಸಿಂಗ್

ಆ) ಅಮೃತ್ ಪಾಲ್ ಸಿಂಗ್

ಇ) ರಾಕೇಶ್ ವರ್ಮ

ಈ) ಅರುಣ್ ಶೌರಿ

ಅಮೃತ್ ಪಾಲ್ ಸಿಂಗ್

ಭಾರತೀಯ ಬ್ಯಾಸ್ಕೆಟ್ ಬಾಲ್ ತಂಡದ ನಾಯಕನಾಗಿರುವ ಅಮೃತ್ಪಾಲ್ ಸಿಂಗ್ ಅವರು ಆಸ್ಟ್ರೇಲಿಯನ್ ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಲೀಗ್ (ಎನ್‌ಬಿಎಲ್) ತಂಡಕ್ಕೆ ಆಯ್ಕೆಯಾದ ಮೊದಲ ಭಾರತೀಯ-ಸಂಜಾತ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದು ಭಾರತೀಯ ಬ್ಯಾಸ್ಕೆಟ್‌ಬಾಲ್ ಕ್ಷೇತ್ರದ ಅದ್ಭುತ ಸಾಧನೆಯಾಗಿದೆ.

23. ಜಂಟಿ ಮಿಲಿಟರಿ ತರಬೇತಿ ವ್ಯಾಯಾಮ "ಯುದ್ಧ್ ಅಭ್ಯಾಸ-2017" ಭಾರತ ಮತ್ತು ಯಾವ ದೇಶದ ನಡುವೆ ನಡೆಯಲಿದೆ?

ಅ) ಜಪಾನ್

ಆ) ನೇಪಾಳ

ಇ) ಅಮೆರಿಕ

ಈ) ರಷ್ಯಾ

ಅಮೆರಿಕ

www.karunaduexams.com

ಭಾರತ ಮತ್ತು ಅಮೆರಿಕ ನಡುವಿನ ಜಂಟಿ ಮಿಲಿಟರಿ ತರಭೇತಿ ವ್ಯಾಯಾಮ "ಯುದ್ದ್ ಅಭ್ಯಾಸ - 2017" ಸೆಪ್ಟೆಂಬರ್ 14 ರಿಂದ 27 ರವರೆಗೆ ಬೇಸ್ ಲೆವಿಸ್ ಮ್ಯಾಕ್ಯಾರ್ಡ್, ವಾಷಿಂಗ್ಟನ್, ಅಮೆರಿಕಾದಲ್ಲಿ ನಡೆಯಲಿದೆ. ಈ ವ್ಯಾಯಾಮವು ಉಭಯ ದೇಶಗಳ ನಡುವಿನ ಅತಿ ದೊಡ್ಡ ಮಿಲಿಟರಿ ಅಭ್ಯಾಸವಾಗಿದೆ.

24. “How India Sees the World: Kautilya to the 21st Century” ಪುಸ್ತಕದ ಲೇಖಕರು ________?

ಅ) ಶ್ಯಾಮ್ ಶರಣ್

ಆ) ಅಶೋಕ್ ಸಿಂಗ್

ಇ) ಅಪೂರ್ವ ಸಿಂಧಿ

ಈ) ಶರಣ್ ಶರ್ಮಾ

ಶ್ಯಾಮ್ ಶರಣ್

25. ಭಾರತದ ಮೊದಲ ಹೈಪರ್ಲೂಪ್ ಯೋಜನೆ ಯಾವ ರಾಜ್ಯದಲ್ಲಿ ಬರಲಿದೆ?

ಅ) ಆಂಧ್ರ ಪ್ರದೇಶ

ಆ) ಕರ್ನಾಟಕ

ಇ) ತೆಲಂಗಣ

ಈ) ಕೇರಳ

ಆಂಧ್ರ ಪ್ರದೇಶ

ಭಾರತದ ಮೊದಲ ಹೈಪರ್ಲೋಪ್ ಯೋಜನೆಯು ಆಂಧ್ರಪ್ರದೇಶದಲ್ಲಿ ವಿಜಯವಾಡ ಮತ್ತು ಅಮರಾವತಿಯ ನಗರ ಕೇಂದ್ರಗಳ ನಡುವೆ ಸ್ಥಾಪನೆಯಾಗಲಿದೆ. ಇದರಡಿ ಐದು ನಿಮಿಷಗಳಲ್ಲಿ ಕೇವಲ 35 ಕಿ.ಮೀ ದೂರವನ್ನು ಕ್ರಮಿಸಬಹುದು. ಆಂಧ್ರ ಪ್ರದೇಶದ ಎಕನಾಮಿಕ್ ಡೆವಲಪ್ಮೆಂಟ್ ಬೋರ್ಡ್ (ಎಪಿ-ಇಡಿಬಿ) ಯೋಜನೆಯ ಅಭಿವೃದ್ದಿಗಾಗಿ ಹೈಪರ್ಲೋಪ್ ಟ್ರಾನ್ಸ್ಪೋರ್ಟೇಷನ್ ಟೆಕ್ನಾಲಜೀಸ್ (ಎಚ್ಟಿಟಿ) ನೊಂದಿಗೆ ಒಡಂಬಡಿಕೆ ಒಪ್ಪಂದಕ್ಕೆ ಸಹಿ ಮಾಡಿದೆ.

26. ಅಂತಾರಾಷ್ಟ್ರೀಯ ಸಾಕ್ಷರತೆ ದಿವಸವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಸೆಪ್ಟೆಂಬರ್ 7

ಆ) ಸೆಪ್ಟೆಂಬರ್ 8

ಇ) ಸೆಪ್ಟೆಂಬರ್ 9

ಈ) ಸೆಪ್ಟೆಂಬರ್ 10

ಸೆಪ್ಟೆಂಬರ್ 8

www.karunaduexams.com

ವ್ಯಕ್ತಿಗಳು, ಸಮಾಜ ಮತ್ತು ಸಮುದಾಯಗಳಿಗೆ ಸಾಕ್ಷರತೆಯ ಮಹತ್ವವನ್ನು ಒತ್ತಿಹೇಳಲು ಸೆಪ್ಟೆಂಬರ್ 8 ರಂದು ಅಂತರರಾಷ್ಟ್ರೀಯ ಸಾಕ್ಷರತಾ ದಿನವನ್ನು ಪ್ರತಿ ವರ್ಷ ಆಚರಿಸಲಾಗುತ್ತದೆ. ಈ ವರ್ಷದ ಥೀಮ್ 'ಲಿಟರಸಿ ಇನ್ ಎ ಡಿಜಿಟಲ್ ವರ್ಲ್ಡ್' ಆಗಿದೆ.

27. ಈ ಕೆಳಗಿನ ಯಾರು "ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ"ದ ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ?

ಅ) ಸುಂದರ್ ಕುಲಕರ್ಣಿ

ಆ) ಹರಿಪ್ರೀತ್ ಸಿಂಗ್

ಇ) ವಿವೇಕ್ ಗೋಯೆಂಕ

ಈ) ರಜನೀಶ್ ಮಲ್ಹೋತ್ರ

ವಿವೇಕ್ ಗೋಯೆಂಕ

ಪ್ರೆಸ್ ಗ್ರೂಪ್ CMD ವಿವೇಕ್ ಗೋಯೆಂಕಾ ಅವರನ್ನು ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ (ಪಿಟಿಐ) ನೂತನ ಅಧ್ಯಕ್ಷರಾಗಿ ಚುನಾಯಿಸಲಾಗಿದೆ. ಮನೋರಮಾ ಆಡಳಿತದ ಹಿರಿಯ ಸಹಾಯಕ ಸಂಪಾದಕ ಮತ್ತು ಸದಸ್ಯರಾದ ರಿಯಾದ್ ಮಾಥ್ಯೂ ಅವರ ಉತ್ತರಾಧಿಕಾರಿಯಾಗಿ ಗೋಯೆಂಕ ನೇಮಕಗೊಂಡಿದ್ದಾರೆ. ದಿ ಹಿಂದೂದ ಮಾಜಿ ಸಂಪಾದಕ ಎನ್. ರವಿ ಅವರು ಪಿಟಿಐಯ ಹೊಸ ಉಪಾಧ್ಯಕ್ಷರಾಗಿ ಏಕಕಾಲದಲ್ಲಿ ಆಯ್ಕೆಯಾಗಿದ್ದಾರೆ.

28. ಭಿಂಡವಾಸ್ ವನ್ಯಜೀವಿ ಅಭಯಾರಣ್ಯ ಯಾವ ರಾಜ್ಯದಲ್ಲಿದೆ?

ಅ) ಗುಜರಾತ್

ಆ) ಹರಿಯಾಣ

ಇ) ಪಂಜಾಬ್

ಈ) ಮಿಜೋರಾಂ

ಹರಿಯಾಣ

29. ಯಾವ ಟೆಲಿಕಾಂ ಸಂಸ್ಥೆ ಮುಕ್ತ ಮೊಬೈಲ್ ವ್ಯಾಲೆಟ್ "ಸ್ಪೀಡ್ ಪೇ" ಜಾರಿಗೊಳಿಸಲು ಪಂಜಾಬ್ ನ್ಯಾಷನಲ್ ಬ್ಯಾಂಕಿನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ?

ಅ) ಬಿಎಸ್ಎನ್ಎಲ್

ಆ) ಏರ್ಟೆಲ್

ಇ) ಐಡಿಯಾ

ಈ) ವೊಡಾಫೋನ್

ಬಿಎಸ್ಎನ್ಎಲ್

ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಸರ್ಕಾರಿ ಸ್ವಾಮ್ಯದ ಬಿಎಸ್ಎನ್ಎಲ್ ದೇಶದ 10 ರಾಜ್ಯಗಳಲ್ಲಿ ಮುಕ್ತ ಮೊಬೈಲ್ ವ್ಯಾಲೆಟ್ "ಸ್ಪೀಡ್ ಪೇ" ಅನ್ನು ಜಾರಿಗೆ ತರಲು ಒಪ್ಪಂದಕ್ಕೆ ಸಹಿ



www.karunaduexams.com

ಹಾಕಿವೆ. ಒಪ್ಪಂದದಡಿಯಲ್ಲಿ, ಬಿಎಸ್ಎನ್ಎಲ್ ಪಂಜಾಬ್, ಚಂಡೀಗಢ (ಯುಟಿ), ಹರಿಯಾಣ, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಜಾರ್ಖಂಡ್ ಮತ್ತು ಉತ್ತರಖಂಡದಲ್ಲಿ ಸ್ಪೀಡ್ ಪೇ" ಸೇವೆಗಳನ್ನು ವಿಸ್ತರಿಸಲಿದೆ.

30. ಸರಕು ಮತ್ತು ಸೇವಾ ತೆರಿಗೆ ನೆಟ್ವರ್ಕ್ (GSTN)ನ ನೂತನ ಮಧ್ಯಂತರ ಅಧ್ಯಕ್ಷರಾಗಿ ನೇಮಕಗೊಂಡವರು ಯಾರು?

ಅ) ಅಮಿತ್ ಭಟ್ಟಚಾರ್ಯ

ಆ) ಕುಲದೀಪ್ ಆಚಾರ್ಯ್

ಇ) ಅಜಯ್ ಭೂಷಣ್ ಪಾಂಡೆ

ಈ) ರಾಮನಾಥ್ ಸಿಂಗ್

ಅಜಯ್ ಭೂಷಣ್ ಪಾಂಡೆ

ವಿಶಿಷ್ಟ ಗುರುತಿನ ಪ್ರಾಧಿಕಾರದ (ಯುಐಡಿಎಐ) ಸಿಇಒ ಅಜಯ್ ಭೂಷಣ್ ಪಾಂಡೆ ರವರನ್ನು ಸರಕು ಮತ್ತು ಸೇವಾ ತೆರಿಗೆ ನೆಟ್ವರ್ಕ್ನ ಮಧ್ಯಂತರ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ. GSTN ಕೇಂದ್ರ, ರಾಜ್ಯಗಳು ಮತ್ತು ಸರ್ಕಾರೇತರ ಹಣಕಾಸು ಸಂಸ್ಥೆಗಳ ಒಡೆತನದ ಲಾಭರಹಿತ ಸಂಸ್ಥೆಯಾಗಿದ್ದು, ಸರಕು ಮತ್ತು ಸೇವಾ ತೆರಿಗೆಗೆ ಇನ್ಫರ್ಮೇಷನ್ ಟೆಕ್ನಾಲಜಿ (ಐಟಿ) ಬೆನ್ನೆಲುಬನ್ನು ನಿರ್ಮಿಸಲು ಕಾರಣವಾಗಿದೆ.

31. 2018 -ಟೈಮ್ಸ್ ಹೈಯರ್ ಎಜುಕೇಶನ್ ಜಗತ್ತಿನ ವಿಶ್ವವಿದ್ಯಾಲಯಗಳ ಶ್ರೇಯಾಂಕದ ಪ್ರಕಾರ ಭಾರತದ ಯಾವ ವಿಶ್ವವಿದ್ಯಾನಿಲಯವನ್ನು ಉನ್ನತ ವಿಶ್ವವಿದ್ಯಾನಿಲಯ ಎಂದು ಹೆಸರಿಸಲಾಗಿದೆ?

ಅ) IISc ಬೆಂಗಳೂರು

ಆ) ಐಐಟಿ ಬಾಂಬೆ

ಇ) ಐಐಟಿ ಖರಗಪುರ

ಈ) ಐಐಟಿ ದೆಹಲಿ

IISc ಬೆಂಗಳೂರು

ಟೈಮ್ಸ್ ಹೈಯರ್ ಎಜುಕೇಶನ್ ಬಿಡುಗಡೆ ಮಾಡಿದ 2018 ಜಗತ್ತಿನ ವಿಶ್ವವಿದ್ಯಾಲಯದ ಶ್ರೇಯಾಂಕದಲ್ಲಿ (WUR), ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್ಸಿ) ಭಾರತದ ಅತ್ಯುನ್ನತ ವಿಶ್ವವಿದ್ಯಾಲಯ ಎಂದು ಗುರುತಿಸಲಾಗಿದೆ. ನಂತರದ ಸ್ಥಾನದಲ್ಲಿ ಐಐಟಿ-ಬಾಂಬೆ, ಐಐಟಿ-ದೆಹಲಿ, ಐಐಟಿ-ಕಾನ್ಪುರ್ ಮತ್ತು ಐಐಟಿ-ಖರಗ್ಪುರ ಇವೆ. ಜಾಗತಿಕವಾಗಿ, ಆಕ್ಸ್ಫರ್ಡ್ ವಿಶ್ವವಿದ್ಯಾನಿಲಯವು ಶ್ರೇಯಾಂಕಗಳಲ್ಲಿ ಮೊದಲ ಸ್ಥಾನವನ್ನು ಉಳಿಸಿಕೊಂಡಿದೆ, ನಂತರದ ಸ್ಥಾನದಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯ, ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಸ್ಟ್ಯಾನ್ಫೋರ್ಡ್ ವಿಶ್ವವಿದ್ಯಾನಿಲಯಗಳು ಸೇರಿವೆ.

www.karunaduexams.com

32. 2017 ಯುಎಸ್ ಓಪನ್ ಟೆನ್ನಿಸ್ ಪಂದ್ಯಾವಳಿಯ ಪುರುಷರ ಸಿಂಗಲ್ಸ್ ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡವರು ಯಾರು?

ಅ) ರಫೆಲ್ ನಡಾಲ್

ಆ) ಸ್ಟ್ಯಾನ್ ವಾವ್ರಿಂಕ

ಇ) ನೊವಾಕ್ ಜೊಕೊವಿಕ್

ಈ) ಆಂಡಿ ಮುರ್ರೆ

ರಫೆಲ್ ನಡಾಲ್

ಸ್ಪ್ಯಾನಿಷ್ ವೃತ್ತಿಪರ ಟೆನ್ನಿಸ್ ಆಟಗಾರ ರಫೆಲ್ ನಡಾಲ್ 2017 ಪುರುಷರ ಸಿಂಗಲ್ಸ್ ಯುಎಸ್ ಓಪನ್ ಟೆನಿಸ್ ಪಂದ್ಯಾವಳಿಯನ್ನು ಗೆದ್ದುಕೊಂಡಿದ್ದಾರೆ. ಮೊದಲ ಬಾರಿಗೆ ಗ್ರಾಂಡ್ ಸ್ಲಾಮ್ ಫೈನಲ್ ಪಂದ್ಯ ತಲುಪಿದ್ದ ಕೆವಿನ್ ಆಂಡರ್ಸನ್ ಅವರನ್ನು 6-3, 6-3, 6-4 ಸೆಟ್ಗಳಿಂದ ಸೋಲಿಸಿ ರಫೆಲ್ ನಡಾಲ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡರು. ಇದು ನಡಾಲ್ ರವರ 16ನೆಯ ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿ ಮತ್ತು ವೃತ್ತಿಜೀವನದ 3ನೇ ಯುಎಸ್ ಓಪನ್ ಪ್ರಶಸ್ತಿಯಾಗಿದೆ.

33. ಪ್ರತಿಷ್ಠಿತ ಪ್ರೊಫೆಸರ್ ಎನ್ ಆರ್ ಮಾಧವ ಮೆನನ್ ಅತ್ಯುತ್ತಮ ಕಾನೂನು ಶಿಕ್ಷಕ ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?

ಅ) ಸಂತೋಷ್ ಥಾಣೆ

ಆ) ವಿಕ್ರಂ ರಾಣೆ

ಇ) ತಹಿರ್ ಮಹಮೂದ್

ಈ) ಎ ವಿ ರೊಹತಂಗಿ

ತಹಿರ್ ಮಹಮೂದ್

ಪ್ರಸಿದ್ಧ ನ್ಯಾಯವಾದಿ ಡಾ.ತಹಿರ್ ಮಹಮೂದ್ ರವರಿಗೆ ಪ್ರತಿಷ್ಠಿತ ಪ್ರೊಫೆಸರ್ ಎನ್.ಆರ್. ಮಾಧವ ಮೆನನ್ ಅತ್ಯುತ್ತಮ ಕಾನೂನು ಶಿಕ್ಷಕ ಪ್ರಶಸ್ತಿಯನ್ನು ನೀಡಲಾಗಿದೆ. ಕಾನೂನು ಶಿಕ್ಷಣ ಮತ್ತು ಕಾನೂನು ವೃತ್ತಿಯಲ್ಲಿ ವಿಶೇಷ ಸೇವೆಗಳನ್ನು ಗುರುತಿಸಿ ಹೊಸದೆಹಲಿಯ ಮೆನನ್ ಇನ್ಸ್ಟಿಟ್ಯೂಟ್ ಆಫ್ ಲೀಗಲ್ ಅಡ್ವೊಕಸಿ ಟ್ರೈನಿಂಗ್ (ಮಿಲಾಟ್) ಮತ್ತು ಸೊಸೈಟಿ ಆಫ್ ಇಂಡಿಯನ್ ಲಾ ಸಂಸ್ಥೆ  ಆಯೋಜಿಸಿದ್ದ 9ನೇ ಶಿಕ್ಷಕರ ದಿನಾಚರಣೆಯಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು.

34. 2017 ಯುಎಸ್ ಓಪನ್ ಟೆನ್ನಿಸ್ ಪಂದ್ಯಾವಳಿಯ ಮಹಿಳೆಯರ ಸಿಂಗಲ್ಸ್ ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡವರು ಯಾರು?

www.karunaduexams.com

ಅ) ಮ್ಯಾಡಿಸನ್ ಕೀಸ್

ಆ) ಸ್ಲೋಯೆನ್ ಸ್ಟೀಫನ್ಸ್

ಇ) ಸೆರೆನಾ ವಿಲಿಯಮ್ಸ್

ಈ) ಅಂಜೆಲಿಕ್ ಕಿರ್ಬರ್

ಸ್ಲೋಯೆನ್ ಸ್ಟೀಫನ್ಸ್

ಮ್ಯಾಡಿಸನ್ ಕೀಸ್ ಅವರನ್ನು ಮಣಿಸಿ ಸ್ಲೋಯೆನ್ ಸ್ಟೀಫನ್ಸ್ ಈ ಸಾಲಿನ ಯುಎಸ್ ಓಪನ್ ಮಹಿಳಾ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

35. ಕರಾವಳಿ ಸವೆತದಿಂದಾಗಿ ಕಣ್ಮರೆಯಾದ "ಪರಾಲಿ I ದ್ವೀಪ" ಯಾವ ರಾಜ್ಯ/ಕೇಂದ್ರಾಡಳಿತದ ಭಾಗವಾಗಿತ್ತು?

ಅ) ಲಕ್ಷದ್ವೀಪ

ಆ) ಅಂಡಮಾನ್ ಮತ್ತು ನಿಕೋಬಾರ್

ಇ) ಕೇರಳ

ಈ) ಕರ್ನಾಟಕ

ಲಕ್ಷದ್ವೀಪ

ಲಕ್ಷದ್ವೀಪದಲ್ಲಿನ 'ಪ್ಯಾರಾಲಿ ಐ ದ್ವೀಪ' ಕರಾವಳಿ ಕೊರೆತದಿಂದ ಶೇ.100% ನಷ್ಟು ಕಣ್ಮರೆಯಾಗಿದೆ ಎಂದು ಹೇಳಲಾಗಿದೆ.

36. ಅಸ್ಸೋಚ್ಯಾಮ್ ನಡೆಸಿದ ಸಮೀಕ್ಷೆಯ ಪ್ರಕಾರ ಉತ್ಪಾದನಾ ಶ್ರೇಷ್ಠತೆಗಳಲ್ಲಿ (Manufacturing Excellence) ಯಾವ ರಾಜ್ಯವು ಅಗ್ರಸ್ಥಾನ ಪಡೆದಿದೆ?

ಅ) ಕರ್ನಾಟಕ

ಆ) ಕೇರಳ

ಇ) ಗುಜರಾತ್

ಈ) ಮಧ್ಯ ಪ್ರದೇಶ

ಕರ್ನಾಟಕ

37. 2017 U-16 ದಕ್ಷಿಣ ಏಷ್ಯಾ ಬ್ಯಾಸ್ಕೆಟ್ಬಾಲ್ (SABA) ಚಾಂಪಿಯನ್ಶಿಪ್ ಅನ್ನು ಯಾವ ದೇಶದ ಗೆದ್ದುಕೊಂಡಿತು?

ಅ) ನೇಪಾಳ

ಆ) ಬಾಂಗ್ಲದೇಶ

ಇ) ಭಾರತ



www.karunaduexams.com

ಈ) ಶ್ರೀಲಂಕಾ

ಭಾರತ

ಭಾರತ ತಂಡ 2017 U-16 ದಕ್ಷಿಣ ಏಷ್ಯಾ ಬ್ಯಾಸ್ಕೆಟ್ಬಾಲ್ (SABA) ಚಾಂಪಿಯನ್ಶಿಪ್ ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

38. ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ)ದ ಚೊಚ್ಚಲ ಜೀವಮಾನ ಸಾಧನೆಯ ಪ್ರಶಸ್ತಿಯನ್ನು ಯಾರಿಗೆ ನೀಡಲಾಗುತ್ತಿದೆ?

ಅ) ಪ್ರಕಾಶ್ ಪಡುಕೋಣೆ

ಆ) ಪಿ ಗೋಪಿಚಂದ್

ಇ) ಸೈನಾ ನೆಹ್ವಲ್

ಈ) ಪಿ ವಿ ಸಿಂಧು

ಪ್ರಕಾಶ್ ಪಡುಕೋಣೆ

ಭಾರತದ ಖ್ಯಾತ ಬ್ಯಾಡ್ಮಿಂಟನ್ ದಂತಕಥೆ ಪ್ರಕಾಶ್ ಪಡುಕೋಣೆ ಅವರು ಬ್ಯಾಡ್ಮಿಂಟನ್ ಕ್ರೀಡೆಗೆ ನೀಡಿರುವ ಸಮೃದ್ಧ ಕೊಡುಗೆಗಾಗಿ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಸ್ಥಾಪಿಸಿದ ಮೊದಲ ಜೀವಮಾನ ಸಾಧನೆಯ ಪ್ರಶಸ್ತಿಯನ್ನು ಪಡೆದುಕೊಳ್ಳಲಿದ್ದಾರೆ. ಈ ಪ್ರಶಸ್ತಿಯು 10 ಲಕ್ಷ ರೂ. ನಗದು ಬಹುಮಾನ ಮತ್ತು ಉಲ್ಲೇಖ ಒಳಗೊಂಡಿದೆ, ಪಡುಕೋಣೆ ಅವರಿಗೆ 1972ರಲ್ಲಿ ಅರ್ಜುನ ಪ್ರಶಸ್ತಿ ಮತ್ತು 1982ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಲಾಗಿದೆ.

39. ಜಂಟಿ ದ್ವಿಪಕ್ಷೀಯ ವಾಯುಪಡೆ ವ್ಯಾಯಾಮ "ಶಹೀನ್ VI" ಪಾಕಿಸ್ತಾನ ಮತ್ತು ಯಾವ ದೇಶದ ನಡುವೆ ಪ್ರಾರಂಭಗೊಂಡಿದೆ?

ಅ) ರಷ್ಯಾ

ಆ) ಚೀನಾ

ಇ) ಇಸ್ರೇಲ್

ಈ) ಇರಾನ್

ಚೀನಾ

40. 2017 ಗ್ಲೋಬಲ್ ಫೈನಾನ್ಶಿಯಲ್ ಸೆಂಟರ್ಸ್ ಇಂಡೆಕ್ಸ್ (ಜಿಎಫ್ಎಫ್ಐ)ನಲ್ಲಿ ಅಗ್ರಸ್ಥಾನ ಪಡೆದುಕೊಂಡ ನಗರ ಯಾವುದು?

ಅ) ಟೊಕಿಯೋ

ಆ) ಲಂಡನ್

ಇ) ಶಾಂಘೈ



www.karunadujexams.com

ಈ) ಸಿಂಗಪುರ

ಲಂಡನ್

2017 ಗ್ಲೋಬಲ್ ಫೈನಾನ್ಶಿಯಲ್ ಸೆಂಟರ್ಸ್ ಇಂಡೆಕ್ಸ್ (ಜಿಎಫ್ಎಫ್ಐ)ನಲ್ಲಿ ಲಂಡನ್ ವಿಶ್ವದ ಅಗ್ರ ಆರ್ಥಿಕ ಕೇಂದ್ರವಾಗಿ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ಈ ಸೂಚ್ಯಂಕವು Z /Yen ಗ್ರೂಪ್ನಿಂದ ಪ್ರಕಟಿಸಲ್ಪಟ್ಟಿದೆ, ಸೂಚ್ಯಂಕದಲ್ಲಿ ನ್ಯೂಯಾರ್ಕ್ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ. ಮುಂಬೈ ಸೂಚ್ಯಂಕದಲ್ಲಿ ಸ್ಥಾನಪಡೆದ ಭಾರತದ ಏಕೈಕ ನಗರವಾಗಿದ್ದು 60 ನೇ ಸ್ಥಾನ ಪಡೆದಿದೆ.

41. 2017 ಗಡಿ ಭದ್ರತಾ ಪಡೆ ಕ್ರೀಡಾಕೂಟ ಆತಿಥ್ಯ ವಹಿಸಲಿರುವ ರಾಜ್ಯ ಯಾವುದು?

ಅ) ಜಾರ್ಖಂಡ್

ಆ) ಹರಿಯಾಣ

ಇ) ಜಮ್ಮು & ಕಾಶ್ಮೀರ

ಈ) ಪಂಜಾಬ್

ಜಮ್ಮು & ಕಾಶ್ಮೀರ

2017 ಗಡಿ ಭದ್ರತಾ ಪಡೆಯ (ಬಿಎಸ್ಎಫ್) ಕ್ರೀಡಾಕೂಟವು ಜಮ್ಮುನಲ್ಲಿ ಸೆಪ್ಟೆಂಬರ್ 12, 2017 ರಂದು ಆರಂಭವಾಯಿತು. ಸುಮಾರು 1,200 ಸಿಬ್ಬಂದಿ ಕುಸ್ತಿ, ಬಾಕ್ಸಿಂಗ್, ಭಾರ ಎತ್ತುವ ಮತ್ತು ಕಬಡಿ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ.

42. ಇತ್ತೀಚೆಗೆ ಹಾಲಿಮಾ ಯಾಕೊಬ್ ರವರು ಯಾವ ದೇಶದ ಮೊಟ್ಟ ಮೊದಲ ಮಹಿಳಾ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ?

ಅ) ಸಿಂಗಪುರ

ಆ) ಮಾರಿಷಸ್

ಇ) ಮಾಲಿ

ಈ) ಕೀನ್ಯಾ

ಸಿಂಗಪುರ

ಸಿಂಗಪುರದ ಮಾಜಿ ಸ್ಪೀಕರ್, ಹಾಲಿ ಸಂಸದೆ ಹಾಲಿಮಾ ಯಾಕೊಬ್ (63) ಅವರು ಸಿಂಗಪುರ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ.ಈ ಸ್ಥಾನಕ್ಕೆ ಮಹಿಳೆಯೊಬ್ಬರು ಆಯ್ಕೆಯಾಗಿರುವುದು ಇದೇ ಮೊದಲು. ಯಾಕೊಬ್ ವಿರುದ್ಧ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಅಧ್ಯಕ್ಷ ಸ್ಥಾನಕ್ಕೆ ನಿಗದಿಪಡಿಸಿರುವ ಯಾವುದೇ ಮಾನದಂಡಗಳಿಗೆ ಅರ್ಹರಾಗಿಲ್ಲ ಎಂದು ಅಧಿಕಾರಿಗಳು ನಿರ್ಧರಿಸಿದರು. ಇದರಿಂದ ಯಾಕೊಬ್ ಅವರ ಆಯ್ಕೆ ಸುಗಮವಾಯಿತು. ಹಾಲಿಮಾ, ಮುಸ್ಲಿಂ ಸಮುದಾಯದ 'ಮಾಲೆ' ಪಂಗಡಕ್ಕೆ ಸೇರಿದವರಾಗಿದ್ದಾರೆ.

www.karunaduexams.com

43. ಸೊಸೈಟಿ ಆಫ್ ಇಂಡಿಯನ್ ಆಟೋಮೊಬೈಲ್ ಮ್ಯಾನುಫ್ಯಾಕ್ಚರರ್ಸ್ (ಎಸ್ಐಎಎಂ) 2017-18 ಸಾಲಿಗೆ ಅಧ್ಯಕ್ಷರಾಗಿ ಈ ಕೆಳಕಂಡ ಯಾರು ಆಯ್ಕೆಯಾಗಿದ್ದಾರೆ?

ಅ) ಮಲ್ಲಿಕ ಶ್ರೀನಿವಾಸನ್

ಆ) ಅಭಯ್ ಫಿರೋಡಿಯಾ

ಇ) ಆನಂದ್ ಮಹೀಂದ್ರ

ಈ) ಶ್ರೀನಿವಾಸ್ ರಾಘವನ್

ಅಭಯ್ ಫಿರೋಡಿಯಾ

ಆಟೋಮೊಬೈಲ್ ಉದ್ಯಮ ಸಂಸ್ಥೆ ಸೊಸೈಟಿ ಆಫ್ ಇಂಡಿಯನ್ ಆಟೊಮೊಬೈಲ್ ಮ್ಯಾನುಫ್ಯಾಕ್ಚರರ್ಸ್ನ 2017-18ನೇ ಸಾಲಿನ ನೂತನ ಅಧ್ಯಕ್ಷರಾಗಿ ಫೋರ್ಸ್ ಮೋಟಾರ್ಸ್ನ ಚೇರ್ಮನ್ ಅಭಯ್ ಫಿರೋಡಿಯಾ ಅವರನ್ನು ಆಯ್ಕೆ ಮಾಡಲಾಗಿದೆ. ಅವರ ಜೊತೆಯಲ್ಲಿ, ಮಹೀಂದ್ರಾ ಮತ್ತು ಮಹೀಂದ್ರಾ ಆಟೋಮೋಟಿವ್ ಸೆಕ್ಟರ್ ಅಧ್ಯಕ್ಷ- ರಾಜಾನ್ ವಧೇರ ಅವರು ಸಂಸ್ಥೆಯ ಹೊಸ ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಮಾರುತಿ ಸುಜುಕಿ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಕೆನಿಚಿ ಆಯುಕಾವಾ 2017-18ರಲ್ಲಿ ಖಜಾಂಚಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

44. ಯಾವ ರಾಜ್ಯದ ಸ್ಟಾರ್ಟ್ ಆಪ್ ಗಳಿಗಾಗಿ ಏರ್ಟೆಲ್ "ಆಫೀಸ್ ಇನ್ ಎ ಬಾಕ್ಸ್" ಸಂಪರ್ಕ ಪರಿಹಾರಗಳನ್ನು ಪ್ರಾರಂಭಿಸಿದೆ?

ಅ) ಕೇರಳ

ಆ) ಕರ್ನಾಟಕ

ಇ) ತಮಿಳುನಾಡು

ಈ) ಆಂಧ್ರ ಪ್ರದೇಶ

ಕರ್ನಾಟಕ

ಕರ್ನಾಟಕ ಸರಕಾರದ ಸ್ಟಾರ್ಟ್-ಅಪ್ ಸೆಲ್ ಉಪಕ್ರಮದ ಅಡಿಯಲ್ಲಿ ಪ್ರಾರಂಭವಾದ ಅಪ್-ಅಪ್ಗಳಿಗಾಗಿ ಏರ್ಟೆಲ್ ಇತ್ತೀಚೆಗೆ 'ಆಫೀಸ್ ಇನ್ ಎ ಬಾಕ್ಸ್' ಅನ್ನು ಬಿಡುಗಡೆ ಮಾಡಿದೆ. ಸ್ಟಾರ್ಟ್-ಅಪ್ ಸೆಲ್ನಲ್ಲಿ ನೋಂದಾಯಿಸಲಾದ 100 ಕ್ಕೂ ಹೆಚ್ಚಿನ ಸ್ಟಾರ್ಟ್-ಅಪ್ಗಳಿಗೆ "ಆಫೀಸ್ ಇನ್ ಎ ಬಾಕ್ಸ್" ಲಭ್ಯವಿರಲಿದೆ.

45. ಈ ಕೆಳಗಿನ ಯಾವ ಬಂದರಿಗೆ "2017 ಕಂಟೈನರ್ ಟರ್ಮಿನಲ್ ಆಫ್ ದಿ ಇಯರ್ ಪ್ರಶಸ್ತಿ" ಲಭಿಸಿದೆ?

ಅ) ಮಂಗಳೂರು ಬಂದರು

ಆ) ಜವಹಾರಲಾಲ್ ನೆಹರು ಬಂದರು

ಇ) ವಿಶಾಖಪಟ್ಟಣ ಬಂದರು

www.karunaduexams.com

ಈ) ಕೊಲ್ಕತ್ತ ಬಂದರು

ಜವಹಾರಲಾಲ್ ನೆಹರು ಬಂದರು

ಮುಂಬೈನಲ್ಲಿ ನಡೆದ ಗೇಟ್ ವೇ ಅವಾರ್ಡ್ಸ್ 2017 ರಲ್ಲಿ ಜವಾಹರಲಾಲ್ ನೆಹರೂ ಪೋರ್ಟ್ ಕಂಟೇನರ್ ಟರ್ಮಿನಲ್ ವರ್ಷದ ಕಂಟೈನರ್ ಟರ್ಮಿನಲ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. ದಟ್ಟಣೆ ನಿರ್ವಹಣೆ, ಸುಲಭ ಸಾಗಣಿಕೆ ಮತ್ತು ಪ್ರತಿಕೂಲ ಪರಿಸ್ಥಿತಿಗಳ ಮಧ್ಯೆ ವ್ಯಾಪಾರವನ್ನು ಬೆಂಬಲಿಸುವ ಮೂಲಭೂತ ಸೌಕರ್ಯಗಳ ಪುನರುಜ್ಜೀವನಕ್ಕಾಗಿ ಈ ಪ್ರಶಸ್ತಿ ಲಭಿಸಿದೆ.

46. ಬಾಂಗ್ಲಾದೇಶದಲ್ಲಿ ರೋಹಿಂಗ್ಯಾ ನಿರಾಶ್ರಿತರಿಗೆ ಸಹಾಯ ಮಾಡಲು ಭಾರತವು ಪ್ರಾರಂಭಿಸಿದ ಕಾರ್ಯಾಚರಣೆ ಯಾವುದು?

ಅ) Operation Human

ಆ) Operation Insaniyat

ಇ) Operation Sadbhavane

ಈ) Operation Sahayhasta

Operation Insaniyat

ಮಯನ್ಮಾರ್ ನಿಂದ ಬಾಂಗ್ಲದೇಶದೊಳಗೆ ರೋಹಿಂಗ್ಯಾ ನಿರಾಶ್ರಿತರ ದೊಡ್ಡ ಪ್ರಮಾಣದಲ್ಲಿ ವಲಸೆ ಬರುತ್ತಿರುವ ಕಾರಣ ಮಾನವೀಯ ಬಿಕ್ಕಟ್ಟಿಗೆ ಪ್ರತಿಕ್ರಿಯೆಯಾಗಿ ಭಾರತವು ಬಾಂಗ್ಲಾದೇಶಕ್ಕೆ ನೆರವು ನೀಡಲು 'ಆಪರೇಷನ್ ಇನ್ಸಾನಿಯಾಟ್ (Operation Insaniyat)' ಅನ್ನು ಪ್ರಾರಂಭಿಸಿದೆ. ಇದರಡಿಯಲ್ಲಿ, ಅಕ್ಕಿ, ಬೇಳೆಕಾಳುಗಳು, ಸಕ್ಕರೆ, ಉಪ್ಪು, ಅಡುಗೆ ಎಣ್ಣೆ, ಬಿಸ್ಕಟ್ಗಳು ಮತ್ತು ಸೊಳ್ಳೆ ಪರದೆಗಳನ್ನು ಒಳಗೊಂಡಿರುವ ಪರಿಹಾರ ಸಾಮಗ್ರಿಗಳನ್ನು ಪೀಡಿತ ಜನರಿಗೆ ಒದಗಿಸಲಾಗುವುದು.

47. ಈ ಕೆಳಗಿನ ಯಾವ ನಗರದಲ್ಲಿ ಇಂಡೋ-ಶ್ರೀಲಂಕಾ ಹಿಂದಿ ಸಮ್ಮೇಳನವನ್ನು ಆಯೋಜಿಸಲಾಗಿದೆ?

ಅ) ನವದೆಹಲಿ

ಆ) ಚೆನ್ನೈ

ಇ) ಜಾಫ್ನ

ಈ) ಕೊಲೊಂಬೊ

ಕೊಲೊಂಬೊ

ಇಂಡೋ-ಶ್ರೀಲಂಕಾ ಹಿಂದಿ ಸಮ್ಮೇಳನವನ್ನು ಕೊಲಂಬೊ ಸಮೀಪದ ಕೆಳನಿಯ ವಿಶ್ವವಿದ್ಯಾಲಯದಲ್ಲಿ ಸೆಪ್ಟೆಂಬರ್ 13 ರಂದು ಹಿಂದಿ ದಿವಸ ಸಂಭ್ರಮಾಚರಣೆಗಳ ಮುನ್ನಾದಿನ 'ಹಿಂದಿ ಇ-ಲರ್ನಿಂಗ್: ಐಡೆಂಟಿಟಿ ಅಂಡ್ ಆಫಿಲಿಟೀಸ್'ನೊಂದಿಗೆ

www.karunaduexams.com

ಆಯೋಜಿಸಲಾಗಿದೆ. ಶ್ರೀಲಂಕಾಕ್ಕೆ ಭಾರತದ ಹೈ ಕಮೀಷನರ್ ಆಗಿರುವ ತಾರಂಜಿತ್ ಸಿಂಗ್ ಸಂಧು ಈ ಸಮ್ಮೇಳನದ ಮುಖ್ಯ ಅತಿಥಿ.

48. 2024 ಮತ್ತು 2028 ಬೇಸಿಗೆ ಒಲಂಪಿಕ್ಸ್ ಕ್ರಮವಾಗಿ ಈ ಕೆಳಗಿನ ಯಾವ ನಗರಗಳಲ್ಲಿ ನಡೆಯಲಿದೆ?

ಅ) ಪ್ಯಾರಿಸ್ ಮತ್ತು ಲಾಸ್ ಏಂಜಲೀಸ್

ಆ) ಲಾಸ್ ಏಂಜಲೀಸ್ ಮತ್ತು ಪ್ಯಾರಿಸ್

ಇ) ಜೂರಿಚ್ ಮತ್ತು ಬ್ರಸಿಲಿಯ

ಈ) ಜೂರಿಚ್ ಮತ್ತು ಪ್ಯಾರಿಸ್

ಪ್ಯಾರಿಸ್ ಮತ್ತು ಲಾಸ್ ಏಂಜಲೀಸ್

49. ಜಿಎಸ್ಟಿ ತಂತ್ರಜ್ಞಾನದ ಸಮಸ್ಯೆಗಳನ್ನು ಮೇಲ್ವಿಚಾರಣೆ ಮಾಡಲು ಕೇಂದ್ರ ಹಣಕಾಸು ಸಚಿವಾಲಯ ಯಾವ ಸಮಿತಿ ರಚಿಸಿದೆ?

ಅ) ರಾಜೀವ್ ಶುಕ್ಲಾ ಸಮಿತಿ

ಆ) ಅರವಿಂದ್ ಪನಾಗರಿಯ ಸಮಿತಿ

ಇ) ಸುಶೀಲ್ ಮೋದಿ ಸಮಿತಿ

ಈ) ರವೀಂದ್ರ ಜೈನ್ ಸಮಿತಿ

ಸುಶೀಲ್ ಮೋದಿ ಸಮಿತಿ

ಜಿಎಸ್ಟಿ ಅನುಷ್ಠಾನದಲ್ಲಿ ಎದುರಾದ ಐಟಿ ಸವಾಲುಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಪರಿಹರಿಸಲು ಬಿಹಾರ ಉಪಮುಖ್ಯಮಂತ್ರಿ ಸುಶೀಲ್ ಕುಮಾರ್ ಮೋದಿಯವರ ನೇತೃತ್ವದ ಸಮಿತಿಯನ್ನು ಕೇಂದ್ರ ಹಣಕಾಸು ಸಚಿವಾಲಯ ರಚಿಸಿದೆ. ಇದಲ್ಲದೆ, ರಫ್ತು ಕಾರ್ಯದರ್ಶಿ ಡಾ ಹಸ್ಮುಖ್ ಆದಿಯಾ ಅವರು ರಫ್ತು ಕ್ಷೇತ್ರದ ಸಮಸ್ಯೆಗಳನ್ನು ಪರಿಶೀಲಿಸಲು ಮತ್ತು ಜಿಎಸ್ಟಿ ಕೌನ್ಸಿಲ್ಗೆ ಜಿಎಸ್ಟಿ ನಂತರದ ರಫ್ತು ಕ್ಷೇತ್ರಕ್ಕೆ ಸಹಾಯ ಮಾಡಲು ಸೂಕ್ತ ತಂತ್ರವನ್ನು ಶಿಫಾರಸು ಮಾಡಲು ರಫ್ತುಗಳ ಸಮಿತಿಯನ್ನು ರಚಿಸಿದ್ದಾರೆ.

50. 12ನೇ ಭಾರತ-ಜಪಾನ್ ವಾರ್ಷಿಕ ಶೃಂಗಸಭೆ ಯಾವ ರಾಜ್ಯದಲ್ಲಿ ಜರುಗಿತು?

ಅ) ಗುಜರಾತ್

ಆ) ಮಧ್ಯ ಪ್ರದೇಶ

ಇ) ಮಹಾರಾಷ್ಟ್ರ

ಈ) ಗೋವಾ

ಗುಜರಾತ್



www.karunaduexams.com

ಭಾರತ-ಜಪಾನ್ ವಾರ್ಷಿಕ ಶೃಂಗಸಭೆಯ 12ನೇ ಆವೃತ್ತಿ ಸೆಪ್ಟೆಂಬರ್ 14 ರಂದು ಗುಜರಾತಿನ ಗಾಂಧಿನಗರದಲ್ಲಿ ನಡೆಯಿತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಪ್ರಧಾನಿ ಶಿಂಜೊ ಅಬೆ ನಡುವಿನ 4 ನೇ ವಾರ್ಷಿಕ ಶೃಂಗಸಭೆ ಇದಾಗಿದೆ. ಈ ಶೃಂಗಸಭೆಯಲ್ಲಿ ಹೂಡಿಕೆ ಪ್ರಚಾರ, ನಾಗರಿಕ ವಾಯುಯಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸೇರಿದಂತೆ ಹಲವಾರು ಪ್ರಮುಖ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರವನ್ನು ಹೆಚ್ಚಿಸಲು 15 ಒಪ್ಪಂದಗಳಿಗೆ ಭಾರತ ಮತ್ತು ಜಪಾನ್ ಸಹಿ ಮಾಡಿವೆ. ಈ ವೇಳೆ ಮುಂಬೈ ಮತ್ತು ಅಹ್ಮದಾಬಾದ್ ನಡುವಿನ ದೇಶದ ಮೊದಲ ಹೈಸ್ಪೀಡ್ ರೈಲು ಕಾರಿಡಾರ್ಗೆ ಅಡಿಪಾಯ ಹಾಕಿದರು.

51. 2017 ರಾಷ್ಟ್ರೀಯ ಹಿಂದಿ ದಿವಸವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಸೆಪ್ಟೆಂಬರ್ 12

ಆ) ಸೆಪ್ಟೆಂಬರ್ 14

ಇ) ಸೆಪ್ಟೆಂಬರ್ 15

ಈ) ಸೆಪ್ಟೆಂಬರ್ 16

ಸೆಪ್ಟೆಂಬರ್ 14

52. ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ರವರು "ಸ್ವಚ್ಚತಾ ಹೈ ಸೇವಾ" ರಾಷ್ಟ್ರವ್ಯಾಪಿ ಅಭಿಯಾನಕ್ಕೆ ಯಾವ ನಗರದಲ್ಲಿ ಚಾಲನೆ ನೀಡಿದರು?

ಅ) ಕಾನ್ಪುರ

ಆ) ವಾರಣಾಸಿ

ಇ) ಬೆಂಗಳೂರು

ಈ) ಅಹ್ಮದಾಬಾದ್

ಕಾನ್ಪುರ

ಉತ್ತರಪ್ರದೇಶದ ಕಾನ್ಪುರದಲ್ಲಿ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ರವರು ರಾಷ್ಟ್ರವ್ಯಾಪಿ "ಸ್ವಚ್ಚತಾ ಹೈ ಸೇವಾ" ಅಭಿಯಾನಕ್ಕೆ ಸೆಪ್ಟೆಂಬರ್ 15 ರಂದು ಚಾಲನೆ ನೀಡಿದರು. ಹದಿನೈದು ದಿನಗಳ ಪ್ರಚಾರ ಕಾರ್ಯಕ್ರಮ ಅಕ್ಟೋಬರ್ 2 ರಂದು ಗಾಂಧಿ ಜಯಂತಿ ದಿವಸ ಮುಕ್ತಾಯಗೊಳ್ಳಲಿದೆ. ಜನರನ್ನು ಒಟ್ಟುಗೂಡಿಸಿ ಸ್ವಚ್ಚ ಭಾರತಕ್ಕಾಗಿ ಮಹಾತ್ಮ ಗಾಂಧಿಯವರ ಕನಸಿಗೆ ಕೊಡುಗೆ ನೀಡಲು ನೈರ್ಮಲ್ಯಕ್ಕಾಗಿ ಸಾರ್ವಜನಿಕ ಚಳವಳಿಯನ್ನು ಬಲಪಡಿಸುವುದು ಇದರ ಉದ್ದೇಶ.

53. ಭಾರತದ ಮೊದಲ ಸುಧಾರಿತ ಹೋಮಿಯೋಪತಿ ವೈರಾಲಜಿ ಪ್ರಯೋಗಾಲಯವು ಯಾವ ನಗರದಲ್ಲಿದೆ ಸ್ಥಾಪನೆಗೊಂಡಿದೆ?

www.karunaduexams.com

ಅ) ಬೆಂಗಳೂರು

ಆ) ಕೊಲ್ಕತ್ತ

ಇ) ಹೈದ್ರಾಬಾದ್

ಈ) ಮುಂಬೈ

ಕೊಲ್ಕತ್ತ

ಆಯುಶ್ ರಾಜ್ಯ ಕೇಂದ್ರ ಸಚಿವ ಶ್ರೀಪಾದ್ ಯೆಸೊ ನಾಯಕ್ ಪಶ್ಚಿಮ ಬಂಗಾಳದ ಕೊಲ್ಕತ್ತಾದಲ್ಲಿ ಡಾ. ಅಂಜಲಿ ಚಟರ್ಜಿ ರೀಜನಲ್ ರಿಸರ್ಚ್ ರಿಸರ್ಚ್ ಇನ್ಸ್ಟಿಟ್ಯೂಟ್ನಲ್ಲಿ ಭಾರತದ ಮೊದಲ ಸುಧಾರಿತ ವೈರಾಲಜಿ ಪ್ರಯೋಗಾಲಯವನ್ನು ಉದ್ಘಾಟಿಸಿದರು. ವೈರಲ್ ಕಾಯಿಲೆಗಳಾದ ಜಪಾನೀಸ್ ಎನ್ಸೆಫಾಲಿಟಿಸ್, ಡೆಂಗ್ಯೂ, ಚಿಕುನ್ಗುನ್ಯಾ ಮತ್ತು ಎಚ್ 1 ಎನ್ 1 (ಹಂದಿ ಜ್ವರ) ಮುಂತಾದ ರೋಗಗಳಿಗೆ ಮೂಲಭೂತ ಸಂಶೋಧನೆ ನಡೆಸಲು ರೂ8 ಕೋಟಿ ವೆಚ್ಚದಲ್ಲಿ ಈ ಪ್ರಯೋಗಾಲಯವನ್ನು ಸ್ಥಾಪಿಸಲಾಗಿದೆ.

54. 2017 ಜಾಗತಿಕ ಮಾನವ ಬಂಡವಾಳ ಸೂಚ್ಯಂಕ (Global Human Capital Index)ದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 67

ಆ) 98

ಇ) 103

ಈ) 110

103

2017 ಜಾಗತಿಕ ಮಾನವ ಬಂಡವಾಳ ಸೂಚ್ಯಂಕದಲ್ಲಿ 130 ದೇಶಗಳಲ್ಲಿ ಭಾರತ 103ನೇ ಸ್ಥಾನ ಪಡೆದಿದೆ. ಜಿನೀವಾ ಮೂಲದ ವರ್ಲ್ಡ್ ಎಕನಾಮಿಕ್ ಫೋರಮ್ (WEF) ಈ ಸೂಚ್ಯಂಕವನ್ನು ಹೊರತಂದಿದೆ. ಈ ಪಟ್ಟಿಯಲ್ಲಿ ನಾರ್ವೆ, ಫಿನ್ಲ್ಯಾಂಡ್, ಸ್ವಿಜರ್ಲ್ಯಾಂಡ್ ಮತ್ತು ಯುನೈಟೆಡ್ ಸ್ಟೇಟ್ಸ್ ಅಗ್ರಸ್ಥಾನದಲ್ಲಿದೆ.

55. ಭಾರತದ ಮೊದಲ ಲಿಥಿಯಂ-ಅಯಾನ್ ಬ್ಯಾಟರಿ ತಯಾರಿಕ ಘಟಕವು ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?

ಅ) ಪಶ್ಚಿಮ ಬಂಗಾಳ

ಆ) ಗುಜರಾತ್

ಇ) ಹರಿಯಾಣ

ಈ) ಉತ್ತರ ಪ್ರದೇಶ

ಗುಜರಾತ್

www.karunaduexams.com

ಭಾರತದ ಮೊದಲ ಲಿಥಿಯಂ ಐಯಾನ್ ಬ್ಯಾಟರಿ ತಯಾರಿಕೆ ಸೌಲಭ್ಯವನ್ನು ಗುಜರಾತಿನ ಹನ್ಸಾಲ್ಪುರದಲ್ಲಿ ಜಪಾನಿನ ಆಟೋಮೊಬೈಲ್ ದೈತ್ಯ ಸುಜುಕಿ ಮೋಟಾರ್ ಕಾರ್ಪೊರೇಷನ್ (ಎಸ್‌ಎಂಸಿ) ಸ್ಥಾಪಿಸಲಿದೆ. ಈ ಸೌಲಭ್ಯವನ್ನು ಸುಝುಕಿ, ತೋಷಿಬಾ ಕಾರ್ಪೊರೇಶನ್ ಮತ್ತು ಡೆನ್ಸೊ ಜಂಟಿಯಾಗಿ $ 180 ದಶಲಕ್ಷದಷ್ಟು ಹೂಡಿಕೆಯೊಂದಿಗೆ ಸ್ಥಾಪಿಸಲಾಗುವುದು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಜಪಾನಿನ ಪ್ರಧಾನಿ ಶಿಂಝೊ ಅಬೆ ಉಪಸ್ಥಿತಿಯಲ್ಲಿ ಮಹಾತ್ಮ ಮಂದಿರದಲ್ಲಿ 12ನೇ ಭಾರತ-ಜಪಾನ್ ವಾರ್ಷಿಕ ಶೃಂಗಸಭೆಯಲ್ಲಿ ಸುಝುಕಿ ಈ ಪ್ರಕಟಣೆಯನ್ನು ಮಾಡಿದೆ.

56. ಬ್ರಿಟನ್ನ ಹೌಸ್ ಆಫ್ ಕಾಮನ್ಸ್‌ನಲ್ಲಿ ಗ್ಲೋಬಲ್ ಡೈವರ್ಸಿಟಿ ಪ್ರಶಸ್ತಿಗೆ ಪಾತ್ರರಾದ ಬಾಲಿವುಡ್ ನಟ ಯಾರು?
ಅ) ಸಲ್ಮಾನ್ ಖಾನ್
ಆ) ಅಮಿತಾಬ್ ಬಚ್ಚನ್
ಇ) ಅಕ್ಷಯ್ ಕುಮಾರ್
ಈ) ಶಾರೂಖ್ ಖಾನ್
ಸಲ್ಮಾನ್ ಖಾನ್
ಬಾಲಿವುಡ್ ಸೂಪರ್ ಸ್ಟಾರ್ ಸಲ್ಮಾನ್ ಖಾನ್ ರವರಿಗೆ ಗ್ಲೋಬಲ್ ಡೈವರ್ಸಿಟಿ ಪ್ರಶಸ್ತಿಯನ್ನು ಸೆಪ್ಟೆಂಬರ್ 15 ರಂದು ಬ್ರಿಟನ್ನ ಹೌಸ್ ಆಫ್ ಕಾಮನ್ಸ್‌ನಲ್ಲಿ ನೀಡಲಾಯಿತು.

57. “Unstoppable: My Life So Far” ಪುಸ್ತಕ ಯಾವ ಕ್ರೀಡಾಪುಟ ಬರೆದಿದ್ದಾರೆ?
ಅ) ಮರಿಯಾ ಶರಾಪೋವ
ಆ) ಚೇತೇಶ್ವರ ಪೂಜಾರ್
ಇ) ಸೆರೆನಾ ವಿಲಿಯಮ್ಸ್
ಈ) ಸೌರವ್ ಗಂಗೂಲಿ
ಮರಿಯಾ ಶರಾಪೋವ
ಟೆನ್ನಿಸ್ ತಾರೆ ಮರಿಯಾ ಶರಾಪೋವ ರವರು “Unstoppable: My Life So Far” ಪುಸ್ತಕವನ್ನು ಬರೆದಿದ್ದಾರೆ.

www.karnaduexams.com

58. ಅಂತಾರಾಷ್ಟ್ರೀಯ ಓಝೋನ್ ಸಂರಕ್ಷಣಾ ದಿನವನ್ನು ________ ರಂದು ಆಚರಿಸಲಾಗುತ್ತದೆ?

ಅ) ಸೆಪ್ಟೆಂಬರ್ 14

ಆ) ಸೆಪ್ಟೆಂಬರ್ 15

ಇ) ಸೆಪ್ಟೆಂಬರ್ 16

ಈ) ಸೆಪ್ಟೆಂಬರ್ 17

ಸೆಪ್ಟೆಂಬರ್ 16

ಓಝೋನ್ ಪದರವನ್ನು ಸಂರಕ್ಷಿಸುವ ಸಲುವಾಗಿ 1987 ರಲ್ಲಿ ಮಾಂಟ್ರಿಯಲ್ ಶಿಷ್ಟಚಾರಕ್ಕೆ ಸಹಿ ಮಾಡಿದ ದಿನಾಂಕವನ್ನು ಸ್ಮರಿಸಲು ಸೆಪ್ಟೆಂಬರ್ 16 ರಂದು ಅಂತಾರಾಷ್ಟ್ರೀಯ ಓಝೋನ್ ಪದರ ಸಂರಕ್ಷಣೆ ದಿನವನ್ನು ಆಚರಿಸಲಾಗುತ್ತದೆ. 2017 ರ ಥೀಮ್ 'Caring for all life under the sun'.

59. ಇತ್ತೀಚೆಗೆ ನಿಧನರಾದ ಐಎಎಫ್ ಮಾರ್ಷಲ್ ಅರ್ಜನ್ ಸಿಂಗ್ ರವರು ಯಾವ ವರ್ಷ ನಡೆದ ಭಾರತ-ಪಾಕಿಸ್ತಾನ ಯುದ್ದದಲ್ಲಿ ಭಾರತದ ಗೆಲುವಿಗೆ ಪ್ರಮುಖ ಪಾತ್ರವಹಿಸಿದ್ದರು?

ಅ) 1961

ಆ) 1965

ಇ) 1966

ಈ) 1971

1965

ಭಾರತೀಯ ವಾಯುಪಡೆಯ ಮೊದಲ ಫೈವ್–ಸ್ಟಾರ್ ದರ್ಜೆ ಅಧಿಕಾರಿ ಅರ್ಜನ್ ಸಿಂಗ್ ನಿಧನರಾದರು. ಕ್ರಿಯಾಶೀಲ ವ್ಯಕ್ತಿಯಾಗಿ ಗುರುತಿಸಿಕೊಂಡ ಅರ್ಜನ್ ಸಿಂಗ್ ಅವರನ್ನು ಭಾರತೀಯ ವಾಯುಪಡೆಯ ಮೊದಲ ಮಾರ್ಷಲ್ ಎಂದೇ ಖ್ಯಾತರಾದವರು. 1965ರಲ್ಲಿ ಪಾಕಿಸ್ತಾನ ವಿರುದ್ದದ ಯುದ್ದದಲ್ಲಿ ಭಾರತದ ಗೆಲುವಿಗೆ ಅರ್ಜನ್ ಸಿಂಗ್ ಮಹತ್ವದ ಪಾತ್ರವಹಿಸಿದ್ದರು. 1964ರ ಆಗಸ್ಟನಿಂದ 1969ರ ವರೆಗೂ ವಾಯುಪಡೆಯ ನೇತೃತ್ವ ವಹಿಸಿದ್ದರು. ಇವರು ಏರ್ ಚೀಫ್ ಮಾರ್ಷಲ್ ಸ್ಥಾನ(1966ರ ಜನವರಿ 16) ಪಡೆದ ಮೊದಲ ಭಾರತೀಯ ವಾಯುಪಡೆಯ ಮುಖ್ಯಸ್ಥ.

60. 2017 ಕೊರಿಯಾ ಓಪನ್ ಸೀರಿಸ್ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿಯನ್ನು ಗೆದ್ದವರು ಯಾರು?

ಅ) ಪಿ ವಿ ಸಿಂಧು

ಆ) ನೊಝೋಮಿ ಓಕುಹರಾ

ಇ) ಸೈನಾ ನೆಹ್ವಾಲ್

www.karunaduexams.com

ಈ) ಪಿಗ್ಮಿ ಗೆಹ್ಲಟ್

ಪಿ ವಿ ಸಿಂಧು

ಪಿ.ವಿ.ಸಿಂಧು ಜಪಾನ್ ಎದುರಾಳಿ ನೊಝೋಮಿ ಒಕುಹರಾ ವಿರುದ್ಧ ಮಹಿಳಾ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ 22-20, 11-21, 21-18 ಸೆಟ್‌ಗಳ ಅಂತರದಿಂದ ಜಯಗಳಿಸಿ ಪ್ರಶಸ್ತಿ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ. ಕೊರಿಯಾ ಓಪನ್ ಸೂಪರ್ ಸಿರೀಸ್ ಗೆದ್ದ ಭಾರತದ ಏಕೈಕ ಮಹಿಳಾ ಕ್ರೀಡಾಪಟು ಎನ್ನುವ ಗೌರವಕ್ಕೆ ಪಿ.ವಿ.ಸಿಂಧು ಪಾತ್ರರಾಗಿದ್ದಾರೆ.

61. 2017 ಫಾರ್ಮುಲಾ ಒನ್ ಸಿಂಗಾಪುರ್ ಗ್ರ್ಯಾಂಡ್ ಪ್ರಿಕ್ಸ್ ಟೂರ್ನಮೆಂಟ್ ಗೆದ್ದವರು ______?

ಅ) ಲೇವಿಸ್ ಹ್ಯಾಮಿಲ್ಟನ್

ಆ) ಡೆನಿಯಲ್ ರಿಕ್ಕಿಯಾರ್ಡೊ

ಇ) ಸೆಬಾಸ್ಟಿಯನ್ ವೆಟಲ್

ಈ) ಸೆರ್ಜಿಯೊ ಪೆರ್ಗಿ

ಲೇವಿಸ್ ಹ್ಯಾಮಿಲ್ಟನ್

62. ಇತ್ತೀಚೆಗೆ "ಮರ್ಸಿಡಿಸ್ ಅರೌಝ್" ರವರು ಯಾವ ದೇಶದ ನೂತನ ಪ್ರಧಾನಿ ಆಗಿ ಆಯ್ಕೆಯಾಗಿದ್ದಾರೆ?

ಅ) ಪೆರು

ಆ) ಮೆಕ್ಸಿಕೊ

ಇ) ನಾರ್ವೆ

ಈ) ಘಾನ

ಪೆರು

ಪೆರುವಿನ ಇಬ್ಬರು ಉಪಾಧ್ಯಕ್ಷರಲ್ಲಿ ಒಬ್ಬರಾಗಿದ್ದ ಮರ್ಸಿಡಿಸ್ ಅರೌಝ್ ರವರು ಪೆರುವಿನ ಹೊಸ ಪ್ರಧಾನಿಯಾಗಿ ನೇಮಕಗೊಂಡಿದ್ದಾರೆ.

63. ಈ ಕೆಳಗಿನ ಯಾರು "ಸಶಸ್ತ್ರ ಸೀಮಾ ಬಲ"ದ ನೂತನ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ?

ಅ) ಬ್ರಹ್ಮೇಂದ್ರ ವರ್ಮ

ಆ) ರಜನಿ ಕಾಂತ್ ಮಿಶ್ರಾ

ಇ) ಭಗವಾನ್ ದಾಸ್ ಗುಪ್ತ

ಈ) ಅಶುತೋಶ್ ಮುಖರ್ಜಿ

www.karunaduexams.com

ರಜನಿ ಕಾಂತ್ ಮಿಶ್ರಾ

ರಜನಿ ಕಾಂತ್ ಮಿಶ್ರಾ, 1984 ಬ್ಯಾಚ್ ಉತ್ತರ ಪ್ರದೇಶ ಕೇಡರ್ ಐಪಿಎಸ್ ಅಧಿಕಾರಿ ರವರು ಸಶಸ್ತ್ರ ಸೀಮಾ ಬಲದ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ. ಅರ್ಚ್ಚಾನಾ ರಾಮಸುಂದರಾಮ್ ರವರು ಸೆಪ್ಟೆಂಬರ್ 30 ರಂದು ನಿವೃತ್ತರಾಗಲಿದ್ದು, ಆ ಸ್ಥಾನವನ್ನು ಮಿಶ್ರಾ ತುಂಬಲಿದ್ದಾರೆ.

64. ಯಾವ ರಾಜ್ಯ ಸರ್ಕಾರ ಸ್ವಾತಂತ್ರ್ಯ ಹೋರಾಟಗಾರರಿಗೆ ಮನೆಗಳನ್ನು ಒದಗಿಸಲು "ಶಹೀದ್ ಗ್ರಾಮ ವಿಕಾಸ ಯೋಜನೆ" ಪ್ರಾರಂಭಿಸಿದೆ?

ಅ) ಜಾರ್ಖಂಡ್

ಆ) ಉತ್ತರ ಪ್ರದೇಶ

ಇ) ಹರಿಯಾಣ

ಈ) ಕೇರಳ

ಜಾರ್ಖಂಡ್

ಜಾರ್ಖಂಡ್ ಸರ್ಕಾರ ಖುಂಟಿ ಜಿಲ್ಲೆಯ ಉಲಿಯಾತುದಲ್ಲಿ "ಶಹೀದ್ ಗ್ರಾಮ ವಿಕಾಸ ಯೋಜನೆ"ಗೆ ಚಾಲನೆ ನೀಡಿದೆ. ಉಲಿಯಾತು ಜಾರ್ಖಂಡಿನ ಬುಡಕಟ್ಟು ನಾಯಕ ಬಿರ್ಸಾ ಮುಂಡಾ ಅವರ ಜನ್ಮಸ್ಥಳ. ಈ ಯೋಜನೆಯ ಉದ್ದೇಶವು ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರ ಹಳ್ಳಿಗಳನ್ನು ಅಭಿವೃದ್ಧಿಪಡಿಸುವುದು. ಈ ಯೋಜನೆಯಡಿ, ಅನೇಕ ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ಗ್ರಾಮಗಳನ್ನು ಅಭಿವೃದ್ಧಿಪಡಿಸಲಾಗುವುದು ಮತ್ತು ಅವರ ಆವಾಸಸ್ಥಾನಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಲಿದೆ.

65. ರಾಷ್ಟ್ರೀಯ ತನಿಖಾ ದಳ (National Investigation Agency)ದ ನೂತನ ಮುಖ್ಯಸ್ಥರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಜೆ ಎಸ್ ಖುರೇಷಿ

ಆ) ಪ್ರೇಮ್ ಚರಣ್

ಇ) ವೈ ಸಿ ಮೋದಿ

ಈ) ರಮೇಶ್ ಥಾಪರ್

ವೈ ಸಿ ಮೋದಿ

ಹಿರಿಯ ಐಪಿಎಸ್ ಅಧಿಕಾರಿ ವೈ.ಸಿ.ಮೋದಿ ಅವರು ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ)ಯ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ. ಸಂಪುಟದ ನೇಮಕ ಸಮಿತಿಯು ವೈ.ಸಿ.ಮೋದಿ ಅವರನ್ನು ಎನ್‌ಐಎ ಪ್ರಧಾನ ನಿರ್ದೇಶಕರಾಗಿ ನೇಮಕ ಮಾಡಲು ಒಪ್ಪಿಗೆ ಸೂಚಿಸಿದೆ. ಮೋದಿ ಅವರು 2022ರ ಮೇ 31ರವರೆಗೆ ಈ ಹುದ್ದೆಯಲ್ಲಿ ಇರಲಿದ್ದಾರೆ.

www.karunaduexams.com

66. ಪತ್ನಿಯರಿಗೆ ಕಿರುಕುಳ ನೀಡುವ ಅಥವಾ ಬಿಟ್ಟುಬಿಡುವ NRI ಗಳಿಗೆ ಪಾಸ್ಪೋರ್ಟ್ ರದ್ದುಗೊಳಿಸಬೇಕೆಂದು ಯಾವ ಉನ್ನತ ಮಟ್ಟದ ಸಮಿತಿಯು ಶಿಫಾರಸು ಮಾಡಿದೆ?

ಅ) ಹರ್ಷವರ್ಧನ್ ಸಿಂಗ್ ಸಮಿತಿ

ಆ) ಅರವಿಂದ್ ಕುಮಾರ್ ಗೋಯೆಲ್ ಸಮಿತಿ

ಇ) ಜಯಕುಮಾರ್ ರಾಣೆ ಸಮಿತಿ

ಈ) ಸಂತೋಷ್ ಮುಖರ್ಜಿ ಸಮಿತಿ

ಅರವಿಂದ್ ಕುಮಾರ್ ಗೋಯೆಲ್ ಸಮಿತಿ

ನಿವೃತ್ತ ನ್ಯಾಯಾಧೀಶ ಅರವಿಂದ್ ಕುಮಾರ್ ಗೋಯೆಲ್ ನೇತೃತ್ವದ ಉನ್ನತ ಮಟ್ಟದ ಸಮಿತಿಯು, ಹೆಂಡತಿಯತಿಗೆ ಕಿರುಕುಳ ನೀಡುವ ಅಥವಾ ದೂರ ಮಾಡುವ NRI ಗಳ ಪಾಸ್ಪೋರ್ಟ್ ಅನ್ನು ಜಪ್ತಿ ಮಾಡುವ ಅಥವಾ ರದ್ದುಗೊಳಿಸಬೇಕೆಂದು ಶಿಫಾರಸ್ಸು ಮಾಡಿದೆ. ಭಾರತವು ಇತರ ದೇಶಗಳೊಂದಿಗೆ ಮಾಡಿಕೊಳ್ಳುವ ಹಸ್ತಾಂತರ ಒಪ್ಪಂದಗಳ ವ್ಯಾಪ್ತಿಯಲ್ಲಿ ಗೃಹ ಹಿಂಸಾಚಾರದ ಪ್ರಕರಣಗಳನ್ನು ಸೇರಿಸಬೇಕೆಂದು ಸಮಿತಿಯು ಶಿಫಾರಸು ಮಾಡಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯ (MEA) ಮೇ 2017 ರಲ್ಲಿ ಈ ಸಮಿತಿಯನ್ನು ರಚಿಸಿತ್ತು.

67. ಕುಟುಂಬ ಕಲ್ಯಾಣ ಸಮಿತಿಗಳನ್ನು ಸ್ಥಾಪಿಸಿದ ಭಾರತದ ಮೊದಲ ರಾಜ್ಯ ಯಾವುದು?

ಅ) ಅಸ್ಸಾಂ

ಆ) ತ್ರಿಪುರ

ಇ) ಜಾರ್ಖಂಡ

ಈ) ಹಿಮಾಚಲ ಪ್ರದೇಶ

ತ್ರಿಪುರ

ಗಂಡಂದಿರು ಮತ್ತು ಸಂಬಂಧಿಕರ ವಿರುದ್ಧ ದಾಖಲಿಸಲಾದ ಮಹಿಳೆಯರ ದೂರುಗಳನ್ನು ಪರೀಕ್ಷಿಸಲು ಮತ್ತು ಸಮಾಲೋಚನೆಯ ಮೂಲಕ ಸೌಹಾರ್ದ ಪರಿಹಾರವನ್ನು ಕಂಡುಕೊಳ್ಳಲು ಕುಟುಂಬ ಕಲ್ಯಾಣ ಜಿಲ್ಲಾ ಸಮಿತಿಗಳನ್ನು ತ್ರಿಪುರ ಸರ್ಕಾರ ಸ್ಥಾಪಿಸಿದ್ದು, ಈ ಮೂಲಕ ಕುಟುಂಬ ಕಲ್ಯಾಣ ಸಮಿತಿ ಸ್ಥಾಪಿಸಿದ ಭಾರತದ ಮೊದಲ ರಾಜ್ಯ ತ್ರಿಪುರವಾಗಿದೆ. ಕುಟುಂಬ ಕಲ್ಯಾಣ ಜಿಲ್ಲೆಯ ಸಮಿತಿಗಳನ್ನು ಸ್ಥಾಪಿಸಿರುವ ದೇಶದ 24 ಹೈಕೋರ್ಟ್‌ಗಳಲ್ಲಿ ಮೊದಲ ಹೈಕೋರ್ಟ್ ತ್ರಿಪುರಾ ಹೈಕೋರ್ಟ್ ಆಗಿದೆ.

www.karunaduexams.com

68. ಈ ಕೆಳಗಿನ ಯಾರಿಗೆ 2017 ಅಕ್ಕಿನೇನಿ ನಾಗೇಶ್ವರ ರಾವ್ (ಎಎನ್‌ಆರ್) ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ?

ಅ) ಡಾ. ಶಿವರಾಜ್ ಕುಮಾರ್

ಆ) ಎಸ್ ಎಸ್ ರಾಜಮೌಳಿ

ಇ) ಕಮಲ್ ಹಾಸನ್

ಈ) ರಜನೀಕಾಂತ್

ಎಸ್ ಎಸ್ ರಾಜಮೌಳಿ

ತೆಲುಗು ಚಲನಚಿತ್ರೋದ್ಯಮಕ್ಕೆ ನೀಡಿದ ಪ್ರಶಂಸನೀಯ ಕೊಡುಗೆಗಾಗಿ ಚಿತ್ರನಿರ್ದೇಶಕ ಎಸ್.ಎಸ್. ರಾಜಮೌಳಿ ಅವರಿಗೆ 2017 ಅಕ್ಕಿನೇನಿ ನಾಗೇಶ್ವರ ರಾವ್ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಲಾಗಿದೆ.

69. ಜಂಟಿ ಮಿಲಿಟರಿ ಅಭ್ಯಾಸ "ಐರನ್ ಯೂನಿಯನ್ 5 (Iron Union 5)" ಯಾವ ಎರಡು ದೇಶಗಳ ನಡುವೆ ನಡೆಯಲಿದೆ?

ಅ) ರಷ್ಯಾ ಮತ್ತು ಪಾಕಿಸ್ತಾನ

ಆ) ಅಮೆರಿಕ ಮತ್ತು ಯುಎಇ

ಇ) ಭಾರತ ಮತ್ತು ಬಾಂಗ್ಲದೇಶ

ಈ) ಅಮೆರಿಕ ಮತ್ತು ಫ್ರಾನ್ಸ್

ಅಮೆರಿಕ ಮತ್ತು ಯುಎಇ

"ಐರನ್ ಯೂನಿಯನ್ 5" ಜಂಟಿ ಮಿಲಿಟರಿ ಅಭ್ಯಾಸ ಅಮೆರಿಕ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಸೆಪ್ಟೆಂಬರ್ 23, 2017 ರಂದು ಅಬುಧಾಬಿದಲ್ಲಿ ಪ್ರಾರಂಭವಾಗಲಿದೆ. ಯುಎಇಯ ಸಶಸ್ತ್ರ ಪಡೆಗಳ ಸನ್ನದ್ಧತೆಯನ್ನು ನವೀಕರಿಸುವುದು ಮತ್ತು ಹೆಚ್ಚಿಸುವುದು ಮತ್ತು ಜಂಟಿ ಮಿಲಿಟರಿ ಕಾರ್ಯಾಚರಣೆಗಳಲ್ಲಿ ಎರಡೂ ಸೇನೆಗಳು ತಮ್ಮ ಅಂತರರಾಷ್ಟ್ರೀಯ ಸಹಕಾರವನ್ನು ಉತ್ತೇಜಿಸಲು ಅನುವು ಮಾಡಿಕೊಡುವುದು ಈ ವ್ಯಾಯಾಮದ ಉದ್ದೇಶವಾಗಿದೆ.

70. ಯುಪಿಐ (UPI) ಅನ್ನು ತನ್ನ ಡಿಜಿಟಲ್ ಪ್ಲಾಟ್ ಫಾರ್ಮ್ ಗೆ ಏಕೀಕರಿಸಿದ ಭಾರತದ ಮೊದಲ ಪೇಮೆಂಟ್ ಬ್ಯಾಂಕ್ ಯಾವುದು?

ಅ) ಏರ್ಟೆಲ್ ಪೇಮೆಂಟ್ ಬ್ಯಾಂಕ್

ಆ) ಪೇಟಿಎಮ್ ಪೇಮೆಂಟ್ ಬ್ಯಾಂಕ್

ಇ) ಪೋಸ್ಟಲ್ ಪೇಮೆಂಟ್ ಬ್ಯಾಂಕ್

ಈ) ಬಂಧನ್ ಪೇಮೆಂಟ್ ಬ್ಯಾಂಕ್

ಏರ್ಟೆಲ್ ಪೇಮೆಂಟ್ ಬ್ಯಾಂಕ್

www.karunaduexams.com

ಏರ್ಟೆಲ್ ಪೇಮೆಂಟ್ ಬ್ಯಾಂಕ್ (ಎಪಿಬಿ) ಯುಪಿಐ (UPI) ಅನ್ನು ತನ್ನ ಡಿಜಿಟಲ್ ಪ್ಲಾಟ್ ಫಾರ್ಮ್ ಗೆ ಏಕೀಕರಿಸಿದ ಭಾರತದ ಮೊದಲ ಪಾವತಿ ಬ್ಯಾಂಕ್ ಆಗಿದೆ. ಇದು ಆನ್ಲೈನ್ / ಆಫ್ಲೈನ್ ವ್ಯಾಪಾರಿಗಳಿಗೆ ಸುರಕ್ಷಿತ ಡಿಜಿಟಲ್ ಪಾವತಿಗಳನ್ನು ಮಾಡಲು ಮತ್ತು ಭಾರತದಲ್ಲಿನ ಯಾವುದೇ ಬ್ಯಾಂಕ್ ಖಾತೆಗೆ ಸುರಕ್ಷಿತವಾಗಿ ತ್ವರಿತ ಹಣ ವರ್ಗಾವಣೆ ಮಾಡಲು ಗ್ರಾಹಕರಿಗೆ ಅನುಕೂಲ ಒದಗಿಸಲಿದೆ.

71. ಮೊದಲ BIMSTEC ವಿಪತ್ತು ನಿರ್ವಹಣೆ ವ್ಯಾಯಾಮ -2017 (BIMSTEC DMEX-2017) ಅನ್ನು ಆಯೋಜಿಸಲಿರುವ ದೇಶ ________?

ಅ) ಬಾಂಗ್ಲದೇಶ

ಆ) ಭಾರತ

ಇ) ನೇಪಾಳ

ಈ) ಶ್ರೀಲಂಕಾ

ಭಾರತ

ಅಕ್ಟೋಬರ್ 10-13, 2017 ರಿಂದ ದೆಹಲಿಯಲ್ಲಿ ಮೊದಲ 'BIMSTEC ವಿಪತ್ತು ನಿರ್ವಹಣಾ ವ್ಯಾಯಾಮ- 2017' (BIMSTEC DMEX-2017) ನಡೆಯಲಿದೆ. BIMSTEC ಗುಂಪಿನ ಎಲ್ಲಾ 7 ರಾಷ್ಟ್ರಗಳ ಪ್ರತಿನಿಧಿಗಳಾದ - ಬಾಂಗ್ಲಾದೇಶ, ಭೂತಾನ್, ಭಾರತ, ಮಯನ್ಮಾರ್, ನೇಪಾಳ, ಶ್ರೀಲಂಕಾ ಮತ್ತು ಥೈಲ್ಯಾಂಡ್ ಈ ಸಂದರ್ಭದಲ್ಲಿ ಭಾಗವಹಿಸಲಿದ್ದಾರೆ.

72. ಯಾವ ರಾಜ್ಯ ಸರ್ಕಾರ ಸಾರ್ವಜನಿಕರಿಗೆ 'ಪೀಪಲ್ ಫಸ್ಟ್' ಎಂಬ ಮೊಬೈಲ್ ಅಪ್ಲಿಕೇಶನ್ ಪ್ರಾರಂಭಿಸಿದೆ?

ಅ) ತೆಲಂಗಣ

ಆ) ಕೇರಳ

ಇ) ಆಂಧ್ರ ಪ್ರದೇಶ

ಈ) ಕರ್ನಾಟಕ

ಆಂಧ್ರ ಪ್ರದೇಶ

ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ರವರು ವಿಜಯವಾಡದಲ್ಲಿ 'ಪೀಪಲ್ ಫಸ್ಟ್' ಮೊಬೈಲ್ ಅಪ್ಲಿಕೇಶನ್ಗೆ ಚಾಲನೆ ನೀಡಿದರು. ಇದು ನಾಗರಿಕರಿಗೆ ಇತ್ತೀಚಿನ ಯೋಜನೆಗಳು ಮತ್ತು ಸರ್ಕಾರದ ಸೇವೆಗಳ ಬಗ್ಗೆ ಸಮಗ್ರ ಮಾಹಿತಿ ಒದಗಿಸಲಿದೆ. ಬಳಕೆದಾರರು ತಮ್ಮ ದೂರುಗಳನ್ನು ನೋಂದಾಯಿಸಲು ಅಪ್ಲಿಕೇಶನ್ ಅನ್ನು ಬಳಸಬಹುದು.

www.karunadu exams.com

73. ಉತ್ತರಖಂಡದ ಸ್ವಚ್ಛ ಭಾರತ ಅಭಿಯಾನದ ಬ್ರಾಂಡ್ ಅಂಬಾಸಿಡರ್ ಆಗಿ ನೇಮಕಗೊಂಡಿರುವ ಬಾಲಿವುಡ್ ನಟ ಯಾರು?

ಅ) ಅಕ್ಷಯ್ ಕುಮಾರ್

ಆ) ಶಾರೂಖ್ ಖಾನ್

ಇ) ಅಮಿತಾಬ್ ಬಚ್ಚನ್

ಈ) ಅಮಿರ್ ಖಾನ್

ಅಕ್ಷಯ್ ಕುಮಾರ್

ಬಾಲಿವುಡ್ ನಟ ಅಕ್ಷಯ್ ಕುಮಾರ್ ರವರು ಉತ್ತರಾಖಂಡದ ಸ್ವಚ್ಛ ಭಾರತ ಅಭಿಯಾನದ ಬ್ರಾಂಡ್ ಅಂಬಾಸಿಡರ್ ಆಗಿ ನೇಮಕಗೊಂಡಿದ್ದಾರೆ. ಈ ಹಿಂದೆ ಅಕ್ಷಯ್ ಕುಮಾರ್ ಉತ್ತರ ಪ್ರದೇಶ ಸರ್ಕಾರದ ಸ್ವಚ್ಛತ ಕಾರ್ಯದ ಬ್ರಾಂಡ್ ಅಂಬಾಸಿಡರ್ ಆಗಿ ನೇಮಕಗೊಂಡಿದ್ದರು.

74. 2017 UNHCR ನನ್ಸೆನ್ ರೆಫ್ಯೂಜೀ(Nansen Refugee) ಪ್ರಶಸ್ತಿಗೆ ಆಯ್ಕೆಯಾಗಿರುವ ಝುನ್ನಾಹ್ ಮುಸ್ತಾಫಾ ಯಾವ ದೇಶದವರು?

ಅ) ಈಜಿಪ್ಟ್

ಆ) ನೈರೋಜಿ

ಇ) ನೈಜೀರಿಯಾ

ಈ) ಉಗಾಂಡ

ನೈಜೀರಿಯಾ

ನೈಜೀರಿಯಾದ ವಕೀಲ ಮತ್ತು ಶಿಕ್ಷಕನಾದ ಝುನ್ನಾಹ್ ಮುಸ್ತಾಫಾ ಅವರಿಗೆ 2017 ರ ಯುಎನ್ ಹೈಕಮಿಷನ್ ಫಾರ್ ರೆಫ್ಯೂಜೀಸ್ (UNHCR) ನನ್ಸೆನ್ ರೆಫ್ಯೂಜೆಸ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ದೇಶದಲ್ಲಿ ಬಂಡಾಯ ಪೀಡಿತ ಮಕ್ಕಳಿಗೆ ಸಹಾಯ ಮಾಡಲು ಹಾಗೂ ಮಧ್ಯಸ್ಥಿಕೆ ವಹಿಸಲು ಪ್ರಮುಖ ಪಾತ್ರವಹಿಸಿದ್ದಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಬೊಕೊ ಹರಮ್ ಹಿಂಸಾಚಾರದ ಕೇಂದ್ರವಾದ ಮೈದುಗುರಿಯಲ್ಲಿನ ಮುಸ್ತಫಾ ಅವರ “ದಿ ಫ್ಯೂಚರ್ ಪ್ರೌಸ್ ಇಸ್ಲಾಮಿಕ್ ಫೌಂಡೇಷನ್ ಸ್ಕೂಲ್” ಈಗ 500 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಒದಗಿಸುತ್ತಿದೆ.

75. “ಇಂಟರ್ನ್ಯಾಷನಲ್ ಟೆಕ್ಸ್ಟೈಲ್ ಮತ್ತು ಅಪ್ಯಾರಲ್ ಫೇರ್" 6 ನೇ ಆವೃತ್ತಿ “ವಸ್ತ್ರಾ-2017" ಯಾವ ನಗರದಲ್ಲಿ ನಡೆಯಲಿದೆ?

ಅ) ಬೆಂಗಳೂರು

ಆ) ಜೈಪುರ

ಇ) ಭೂಪಾಲ್

ಈ) ಮಧುರೈ



www.karunaduexams.com

ಜೈಪುರ

76. ಭಾರತದ ಮೊದಲ ಎಲೆಕ್ಟ್ರಿಕ್ ಬಸ್ ಸೇವೆಯನ್ನು ಯಾವ ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ?

ಅ) ತಮಿಳುನಾಡು

ಆ) ತೆಲಂಗಣ

ಇ) ಹಿಮಾಚಲ ಪ್ರದೇಶ

ಈ) ಪಂಜಾಬ್

ಹಿಮಾಚಲ ಪ್ರದೇಶ

ದೇಶದ ಮೊದಲ ವಿದ್ಯುತ್ ಬಸ್ ಸೇವೆಗೆ ಹಿಮಾಚಲ ಪ್ರದೇಶದ ಮನಾಲಿ ಸಮೀಪದ ರೋಹ್ಟಂಗ್ ಪಾಸ್, ಪ್ರವಾಸಿ ತಾಣದಲ್ಲಿ ಪ್ರಾರಂಭಿಸಲಾಗಿದೆ. ಗೋಲ್ಡ್ಸ್ಟೋನ್ ಇನ್ಫ್ರಾಟೆಚ್ ನಿರ್ಮಿಸಿದ ವಿದ್ಯುತ್ ಬಸ್ಗಳು ಆಟೋಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ARAI) ನಿಂದ ಪ್ರಮಾಣೀಕರಿಸಲ್ಪಟ್ಟಿವೆ. ಪ್ರತಿ ಎಲೆಕ್ಟ್ರಿಕ್ ಬಸ್ 30 ಪ್ರಯಾಣಿಕರನ್ನು ಸಾಗಿಸುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ಸಂಪೂರ್ಣವಾಗಿ ಚಾರ್ಜ್ ಮಾಡಲಾದ ಬ್ಯಾಟರಿಗಳೊಂದಿಗೆ 200 ಕಿ.ಮೀ ಚಲಿಸಲಿವೆ.

77. ಈ ಕೆಳಗಿನ ಯಾವ ಭಾರತದ ಚಲನಚಿತ್ರ 2018 ರ ಆಸ್ಕರ್ ಪ್ರಶಸ್ತಿಗೆ ಅಧಿಕೃತ ಪ್ರವೇಶ ಪಡೆದಿದೆ?

ಅ) ನ್ಯೂಟನ್

ಆ) ಬಾಹುಬಲಿ

ಇ) ಟಾಯ್ಲೆಟ್: ಏಕ್ ಪ್ರೇಮ್ ಕಥಾ

ಈ) ಲಾಸ್ಟ್ ಬಸ್

ನ್ಯೂಟನ್

ರಾಜ್ ಕುಮಾರ್ ರಾವ್ ಅಭಿನಯಿಸಿರುವ ಚಲನಚಿತ್ರ "ನ್ಯೂಟನ್" 2018 ರ ಆಸ್ಕರ್ ಪ್ರಶಸ್ತಿಗೆ ಅಧಿಕೃತ ಪ್ರವೇಶ ಪಡೆದಿದೆ. ಅಮಿತ್ ಮಾಸುರ್ಕರ್ ನಿರ್ದೇಶನದ ನ್ಯೂಟನ್ ಸಿನೆಮಾವನ್ನು ಮನೀಶ್ ಮುಂದ್ರ ನಿರ್ಮಾಣ ಮಾಡಿದ್ದು, ಬಾಲಿವುಡ್ ನ ಪ್ರಖ್ಯಾತ ಬ್ಯಾನರ್ "ದೃಶ್ಯ ಫಿಲಮ್ಸ್" ಅಡಿಯಲ್ಲಿ ಈ ಚಿತ್ರವನ್ನು ಹೊರತರಲಾಗಿತ್ತು.

www.karunaduexams.com

78. ಈ ಕೆಳಗಿನ ಯಾವ ರಾಜ್ಯದಲ್ಲಿ "ಪ್ರಧಾನ ಮಂತ್ರಿ LPG ಪಂಚಾಯತ್" ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು?

ಅ) ರಾಜಸ್ತಾನ

ಆ) ಗುಜರಾತ್

ಇ) ಮಧ್ಯ ಪ್ರದೇಶ

ಈ) ಜಾರ್ಖಂಡ್

ಗುಜರಾತ್

ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಧರ್ಮೇಂದ್ರ ಪ್ರಧಾನ್ ರವರು ಸೆಪ್ಟೆಂಬರ್ 23 ರಂದು ಗುಜರಾತಿನ ಗಾಂಧಿನಗರ ಜಿಲ್ಲೆಯ ಮೋಟಾ ಇಶನ್ಪುರ್ ಗ್ರಾಮದಲ್ಲಿ ಪ್ರಧಾನ್ ಮಂತ್ರಿ LPG ಪಂಚಾಯತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಉಪಕ್ರಮ ಇದಾಗಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಎಲ್ಪಿಜಿ ಸಂಪರ್ಕಗಳನ್ನು ವಿತರಿಸಲು ಜಾರಿಗೆ ತರಲಾಗಿದೆ. ಎಲ್ಪಿಜಿ ಪಂಚಾಯತ್ ಉದ್ದೇಶವು ಶುದ್ಧ ಇಂಧನವನ್ನು ಸರಿಯಾಗಿ ಬಳಸುವುದು ಮತ್ತು ಅದರ ಅನೇಕ ಪ್ರಯೋಜನಗಳನ್ನು ಎಲ್ಪಿಜಿ ಬಳಕೆದಾರರಲ್ಲಿ ಅರಿವು ಮೂಡಿಸುವುದು ಆಗಿದೆ. ಯೋಜನೆಯಡಿಯಲ್ಲಿ ಮುಂದಿನ ಒಂದುವರೆ ವರ್ಷಗಳಲ್ಲಿ ದೇಶಾದ್ಯಂತ ಒಂದು ಲಕ್ಷ ಎಲ್ಪಿಜಿ ಪಂಚಾಯತ್ಗಳನ್ನು ಸಕ್ರಿಯಗೊಳಿಸಲಾಗುವುದು.

79. ಜಂಟಿ ಮಿಲಿಟರಿ ಅಭ್ಯಾಸ "ಪಾಂಡ-ಕಾಂಗರೂ 2017" ಆಸ್ಟ್ರೇಲಿಯಾ ಮತ್ತು ಯಾವ ದೇಶದನಡುವೆ ನಡೆಯಿತು?

ಅ) ಫಿಲಿಫೈನ್ಸ್

ಆ) ಥಾಯ್ಲೆಂಡ್

ಇ) ಚೀನಾ

ಈ) ಇಂಡೋನೇಷಿಯಾ

ಚೀನಾ

ಜಂಟಿ ಮಿಲಿಟರಿ ತರಬೇತಿ "ಪಾಂಡ-ಕಾಂಗರೂ 2017" ಚೀನಾ ಮತ್ತು ಆಸ್ಟ್ರೇಲಿಯಾದ ಸೇನಾ ಪಡೆಗಳ ನಡುವೆ ನೈರುತ್ಯ ಚೀನಾದ ಯುನ್ನಾನ್ ಪ್ರಾಂತ್ಯದ ರಾಜಧಾನಿಯಾದ ಕುನ್ಮಿಂಗ್ನಲ್ಲಿ ಸೆಪ್ಟೆಂಬರ್ 10 ರಿಂದ 20 ರವರೆಗೆ ನಡೆಯಿತು.

www.karunaduexams.com

80. ಡಾಬರ್ ಇಂಡಿಯಾವು ಆನ್ಲೈನ್ ಆಯುರ್ವೇದ ಮಾರುಕಟ್ಟೆಗಾಗಿ ಯಾವ ಇ-ಕಾಮರ್ಸ್ ಸಂಸ್ಥೆಯೊಂದಿಗೆ ಕೈಜೋಡಿಸಿದೆ?

ಅ) ಫ್ಲಿಪ್ ಕಾರ್ಟ್

ಆ) ಅಮೆಜಾನ್ ಇಂಡಿಯಾ

ಇ) ಸ್ನಾಪ್ ಡೀಲ್

ಈ) ಇ-ಬೇ

ಅಮೆಜಾನ್ ಇಂಡಿಯಾ

81. ಈ ಕೆಳಗಿನ ಯಾವ ರಾಜ್ಯ 2017ನೇ ವರ್ಷವನ್ನು ಇ-ಪ್ರಗತಿ ವರ್ಷವೆಂದು ಘೋಷಿಸಿದೆ?

ಅ) ತೆಲಂಗಣ

ಆ) ಆಂಧ್ರ ಪ್ರದೇಶ

ಇ) ಕರ್ನಾಟಕ

ಈ) ಗೋವಾ

ಆಂಧ್ರ ಪ್ರದೇಶ

ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ರವರು 2017-18 ವರ್ಷವನ್ನು ಇ-ಪ್ರಗತಿ ವರ್ಷವೆಂದು ಘೋಷಿಸಿದ್ದಾರೆ. ಆಂಧ್ರ ಪ್ರದೇಶದ ಸರ್ಕಾರಿ ಅಧಿಕಾರಿಗಳಿಗೆ ಹೊಸ ತಂತ್ರಜ್ಞಾನಗಳು ಮತ್ತು ಅದರ ಬಳಕೆಯ ಪರಿಚಯ ಮತ್ತು ನವೀಕರಿಸಲು ಇ-ಪ್ರಗತಿ ತರಬೇತಿ ಕಾರ್ಯಕ್ರಮವಾಗಿದೆ. ಆರು ವಾರಗಳ ತರಬೇತಿಯನ್ನು ಆಂಧ್ರ ಸರಕಾರದ ಎಲ್ಲಾ 32 ವಿಭಾಗಗಳಿಗೆ ಇಂಡಿಯನ್ ಸ್ಕೂಲ್ ಆಫ್ ಬ್ಯುಸಿನೆಸ್ (ಐಬಿಎಸ್), ಹೈದರಾಬಾದಿನಲ್ಲಿ ನಡೆಸಲಾಗುತ್ತದೆ.

82. ಜಂಟಿ ಮಿಲಿಟರಿ ವ್ಯಾಯಾಮ "DRUZBA 2017" ಯಾವ ದೇಶಗಳ ನಡುವೆ ಆರಂಭವಾಗಿದೆ?

ಅ) ಪಾಕಿಸ್ತಾನ ಮತ್ತು ಚೀನಾ

ಆ) ಚೀನಾ ಮತ್ತು ನೇಪಾಳ

ಇ) ಪಾಕಿಸ್ತಾನ ಮತ್ತು ಭಾರತ

ಈ) ಪಾಕಿಸ್ತಾನ ಮತ್ತು ರಷ್ಯಾ

ಪಾಕಿಸ್ತಾನ ಮತ್ತು ರಷ್ಯಾ

ಜಂಟಿ ಮಿಲಿಟರಿ ವ್ಯಾಯಾಮ "DRUZBA 2017" ಪಾಕಿಸ್ತಾನ ವಿಶೇಷ ಪಡೆ ಮತ್ತು ರಷ್ಯಾದ ಸೇನೆ ನಡುವೆ ಸೆಪ್ಟೆಂಬರ್ 25, 2017 ರಷ್ಯಾದ ಮಿನರಲ್ ವೇಡಿನಲ್ಲಿ ಪ್ರಾರಂಭವಾಗಿದೆ. ಜಂಟಿ ಭಯೋತ್ಪಾದನಾ ಕಾರ್ಯಾಚರಣೆಗಳು, ಸೆರೆಯಾಳು ಕಾರ್ಯಾಚರಣೆ ಅಭ್ಯಾಸ

www.karunaduexams.com

ಮಾಡಲಾಗುವುದು. ಮೊದಲನೆ ಜಂಟಿ ಸೇನಾ ಕಾರ್ಯಾಚರಣೆ ಅಕ್ಟೋಬರ್ 2016 ರಲ್ಲಿ ನಡೆದಿತ್ತು.

83. "The Shershah of Kargil: Captain Vikram Batra" ಪುಸ್ತಕದ ಲೇಖಕರು ______-?

ಅ) ದೀಪಕ್ ಸುರಾನಾ

ಆ) ಮಾಧವನ್

ಇ) ರಮಣ್ ಮುಖರ್ಜಿ

ಈ) ವಿ ಕೆ ಸಿಂಗ್

ದೀಪಕ್ ಸುರಾನಾ

"The Shershah of Kargil: Captain Vikram Batra" ಎಂಬ ಪುಸ್ತಕವನ್ನು ದೀಪಕ್ ಸುರನಾ ಬರೆದಿದ್ದಾರೆ. ಇದು ಕಾರ್ಗಿಲ್ ಯುದ್ಧದ ನಾಯಕ ಲೇಟ್ ಕ್ಯಾಪ್ಟನ್ ವಿಕ್ರಮ್ ಬಾತ್ರಾ ಅವರ ಜೀವನಚರಿತ್ರೆಯಾಗಿದೆ. ಕ್ಯಾಪ್ಟನ್ ವಿಕ್ರಮ್ ಬಾತ್ರಾ ಅವರಿಗೆ ಪರಮ ವೀರ ಚಕ್ರವನ್ನು ಮರಣೋತ್ತರವಾಗಿ ನೀಡಲಾಗಿದೆ.

84. ಹೊಸದಾಗಿ ರಚಿಸಲಾಗಿರುವ ಪ್ರಧಾನ ಮಂತ್ರಿ ಆರ್ಥಿಕ ಸಲಹಾ ಸಮಿತಿ (PMEAC)ಯ ಮುಖ್ಯಸ್ಥ ಯಾರು?

ಅ) ಮಣಿಕಾಂತ್ ಶರ್ಮಾ

ಆ) ಸುಶೀಲ್ ಕಾಂತ್

ಇ) ಬಿಬೆಕ್ ದೆಬ್ರಾಯ್

ಈ) ಯಶ್ವಂತ್ ಸಿನ್ಹಾ

ಬಿಬೆಕ್ ದೆಬ್ರಾಯ್

ಪ್ರಧಾನಿ ನರೇಂದ್ರ ಮೋದಿ ರವರು ಇತ್ತೀಚೆಗೆ ಪ್ರಧಾನ ಮಂತ್ರಿ (ಪಿಎಂಇಎಸಿ) ಗೆ ನೀತಿ ಆಯೋಗದ ಸದಸ್ಯ ಬಿಬೆಕ್ ದೆಬ್ರಾಯ್ ಅಧ್ಯಕ್ಷತೆ ವಹಿಸಿರುವ ಆರ್ಥಿಕ ಸಲಹಾ ಮಂಡಳಿಯನ್ನು ರಚಿಸಿದ್ದಾರೆ. 5 ಸದಸ್ಯರ ಆರ್ಥಿಕ ಸಲಹಾ ಮಂಡಳಿಯು ಆರ್ಥಿಕ ಪ್ರಾಮುಖ್ಯತೆಯ ಸಮಸ್ಯೆಗಳನ್ನು ಪರಿಹರಿಸಲಿದೆ. ದೆಬ್ರಾಯೊ ಜೊತೆಗೆ ಅರ್ಥಶಾಸ್ತ್ರಜ್ಞರಾದ ಸುರಿತ್ ಭಲ್ಲಾ, ರತಿನ್ ರಾಯ್ ಮತ್ತು ಅಶಿಮಾ ಗೋಯಲ್ ರವರು ಸಮಿತಿಯ ಅರೆಕಾಲಿಕ ಸದಸ್ಯರಾಗಿ ಇರಲಿದ್ದಾರೆ.

www.karunaduexams.com

85. ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ಯಾವ ವೆಬ್ ಪೋರ್ಟಲ್ ಅನ್ನು ಪ್ರಾರಂಭಿಸಿದೆ?

ಅ) Pencil

ಆ) Shiksha

ಇ) Childcare

ಈ) Sriraksha

Pencil

ಕೇಂದ್ರ ಗೃಹ ಸಚಿವರಾd ರಾಜನಾಥ್ ಸಿಂಗ್ ರವರು ನವದೆಹಲಿಯಲ್ಲಿ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು 'ಪೆನ್ಸಿಲ್' ಎಂಬ ವೆಬ್ ಪೋರ್ಟಲ್ ಅನ್ನು ಪ್ರಾರಂಭಿಸಿದ್ದಾರೆ. PENCIL ಎಂದರೆ Platform for Effective Enforcement for No Child Labour, ಇದನ್ನು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ (MoLE) ಅಭಿವೃದ್ಧಿಪಡಿಸಿದೆ. ಬಾಲಕಾರ್ಮಿಕರಿಗಾಗಿ ಇದು ವಿದ್ಯುನ್ಮಾನ ವೇದಿಕೆಯಾಗಿದೆ.

86. ಭಾರತದ ಚೊಚ್ಚಲ "ಇಂಡಿಯಾ ಮೊಬೈಲ್ ಕಾಂಗ್ರೆಸ್ 2017" ಆತಿಥ್ಯ ವಹಿಸಲಿರುವ ನಗರ ಯಾವುದು?

ಅ) ಹೈದ್ರಾಬಾದ್

ಆ) ನವ ದೆಹಲಿ

ಇ) ಪುಣೆ

ಈ) ಬೆಂಗಳೂರು

ನವ ದೆಹಲಿ

ಮೊಟ್ಟ ಮೊದಲ ಇಂಡಿಯಾ ಮೊಬೈಲ್ ಕಾಂಗ್ರೆಸ್ (ಐಎಂಸಿ) ಸೆಪ್ಟೆಂಬರ್ 27 ರಿಂದ 29, 2017 ರವರೆಗೆ ನವದೆಹಲಿಯ ಪ್ರಗತಿ ಮೈದಾನದಲ್ಲಿ ನಡೆಯಲಿದೆ. ಸೆಲ್ಯುಲರ್ ಆಪರೇಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಎಲೆಕ್ಟ್ರಾನಿಕ್ಸ್ ಮತ್ತು ಇನ್ಫರ್ಮೇಷನ್ ಟೆಕ್ನಾಲಜಿ ಸಚಿವಾಲಯದ ಬೆಂಬಲದೊಂದಿಗೆ ಈ ಕಾಂಗ್ರೆಸ್ ಅನ್ನು ಆಯೋಜಿಸಲಾಗುತ್ತಿದೆ

87. ಈ ಕೆಳಗಿನ ಯಾವ ಭಾರತೀಯ ವ್ಯಕ್ತಿಗೆ "2017 ವಾನ್ ಹಿಪ್ಪೆಲ್" ಪ್ರಶಸ್ತಿ ಲಭಿಸಿದೆ?

ಅ) ಅಜೀಂ ಪ್ರೇಮ್ ಜಿ

ಆ) ಸಿ ಎನ್ ಆರ್ ರಾವ್

ಇ) ನಾರಾಯಣ ಮೂರ್ತಿ

ಈ) ಕಿರಣ್ ಮಜುಂದಾರ್ ಷಾ

ಸಿ ಎನ್ ಆರ್ ರಾವ್

www.karunaduexams.com

ಹಿರಿಯ ವಿಜ್ಞಾನಿ ಪ್ರೊ.ಸಿ.ಎನ್.ಆರ್.ರಾವ್ ಅವರಿಗೆ ಅಮೆರಿಕದ ಅತ್ಯುನ್ನತ 'ವಾನ್ ಹಿಪ್ಪಲ್' ಪ್ರಶಸ್ತಿ ಲಭಿಸಿದೆ. ಅಮೆರಿಕದ ಮೆಟಿರಿಯಲ್ ರಿಸರ್ಚ್ ಸೊಸೈಟಿಯು ಮೆಟಿರಿಯಲ್ ರಿಸರ್ಚ್ (ವಸ್ತುಗಳ ಸಂಶೋಧನೆ) ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿದ ವಿಜ್ಞಾನಿಗಳಿಗೆ ಈ ಪ್ರಶಸ್ತಿ ನೀಡುತ್ತದೆ.ಈ ಪ್ರಶಸ್ತಿ ಪಡೆಯುತ್ತಿರುವ ಏಷ್ಯಾ ಖಂಡದ ಮೊದಲ ವಿಜ್ಞಾನಿ ಎನ್ನುವ ಕೀರ್ತಿಗೆ ರಾವ್ ಅವರು ಭಾಜನರಾಗಿದ್ದಾರೆ.

88. ಮಾನವೀಯ ಸಹಾಯ ಮತ್ತು ವಿಪತ್ತು ನಿರ್ವಹಣಾ ವ್ಯಾಯಾಮ "ಪ್ರಲೇ ಸಹಾಯಂ" ಯಾವ ರಾಜ್ಯದಲ್ಲಿ ನಡೆಯಿತು?

ಅ) ಕೇರಳ

ಆ) ಪಂಜಾಬ್

ಇ) ತೆಲಂಗಣ

ಈ) ತಮಿಳುನಾಡು

ತೆಲಂಗಣ

ಹೈದರಾಬಾದ್ ಮತ್ತು ಸಿಕಂದರಾಬಾದಿನ ನಗರಗಳಲ್ಲಿ 2 ದಿನಗಳ ಮಾನವೀಯ ಸಹಾಯ ಮತ್ತು ವಿಪತ್ತು ನಿರ್ವಹಣಾ ವ್ಯಾಯಾಮ "ಪ್ರಲೇ ಸಹಾಯಂ" ನಡೆಯಿತು. ಮಾನವ ನಿರ್ಮಿತ ಮತ್ತು ನೈಸರ್ಗಿಕ ವಾತಾವರಣ ಬದಲಾವಣೆ ಮತ್ತು ಪ್ರವಾಹಗಳು ಸೇರಿದಂತೆ ನಗರ ದುರಂತಗಳ ಬಗ್ಗೆ ಸಾರ್ವಜನಿಕ ಅರಿವು ಮೂಡಿಸುವುದು ವ್ಯಾಯಾಮದ ಉದ್ದೇಶವಾಗಿದೆ.

89. 'ದೇಶದಲ್ಲಿ ಪ್ರತಿ ಕುಟುಂಬಕ್ಕೂ ವಿದ್ಯುತ್ ಸಂಪರ್ಕ ಕಲ್ಪಿಸುವ ಮಹತ್ವದ ಉದ್ದೇಶದಿಂದ ಕೇಂದ್ರ ಸರ್ಕಾರ ಯಾವ ಯೋಜನೆ ಜಾರಿಗೆ ತಂದಿದೆ?

ಅ) ಸುರಕ್ಷಾ

ಆ) ಸೌಭಾಗ್ಯ

ಇ) ನಿತ್ಯಜ್ಯೋತಿ

ಈ) ಬೆಳಕು

ಸೌಭಾಗ್ಯ

ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ರವರು "ಸಹಜ್ ಬಿಜ್ಲಿ ಹರ್ ಘರ್ ಯೋಜಾನ 'ಸೌಭಾಗ್ಯ' ಯೋಜನೆಗೆ ಚಾಲನೆ ನೀಡಿದರು. ಡಿಸೆಂಬರ್ 2017 ವೇಳೆಗೆ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ನೀಡುವುದು ಇದರ ಉದ್ದೇಶ.

www.karunaduexams.com

90. ಬೆಲ್ಜಿಯನ್ ಜೂನಿಯರ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಮಹಿಳೆಯರ ಸಿಂಗಲ್ಸ್ U-19 ವಿಭಾಗದಲ್ಲಿ ಪ್ರಶಸ್ತಿಯನ್ನು ಗೆದ್ದವರು ಯಾರು?

ಅ) ಅರ್ಪಿತ ರೆಡ್ಡಿ

ಆ) ಮಾನ್ವಿ ಸಿಂಗ್

ಇ) ವೈಷ್ಣವಿ ರೆಡ್ಡಿ

ಈ) ಶ್ರಾನ್ವಿ ರಾಜ್

ವೈಷ್ಣವಿ ರೆಡ್ಡಿ

91. ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ ಚಾಂಪಿಯನ್ ಷಿಪ್-2017 ಆತಿಥ್ಯ ವಹಿಸಲಿರುವ ರಾಜ್ಯ ಯಾವುದು?

ಅ) ತಮಿಳುನಾಡು

ಆ) ಕೇರಳ

ಇ) ಒಡಿಶಾ

ಈ) ಪಂಜಾಬ್

ತಮಿಳುನಾಡು

57 ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್ಶಿಪ್ಸ್ 2017 ಚೆನ್ನೈನ ಜವಹಾರ್ ಲಾಲ್ ನೆಹರೂ ಕ್ರೀಡಾಂಗಣದಲ್ಲಿ ಸೆಪ್ಟೆಂಬರ್ 25ರಂದು ಆರಂಭವಾಗಿದೆ. ವಿವಿಧ ರಾಜ್ಯ, ಇಲಾಖೆಗಳು ಮತ್ತು ಸಾರ್ವಜನಿಕ ವಲಯ ಸಂಸ್ಥೆಗಳಿಂದ 1200 ಕ್ರೀಡಾಪಟುಗಳು ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ.

92. ಈ ಕೆಳಗಿನ ಯಾವ ಕ್ಷೇತ್ರದ ಅಭಿವೃದ್ದಿಪಡಿಸುವ ಸಲುವಾಗಿ ಕೇಂದ್ರ ಸರ್ಕಾರ ಇತ್ತೀಚೆಗೆ "DPIDF" ವಿಶೇಷ ನಿಧಿಯನ್ನು ಸ್ಥಾಪಿಸಿದೆ?

ಅ) ತೋಟಗಾರಿಕೆ

ಆ) ಡೈರಿ ಉದ್ಯಮ

ಇ) ಕೈಗಾರಿಕೆ

ಈ) ನವೋದ್ಯಮ

ಡೈರಿ ಉದ್ಯಮ

ಹೈನುಗಾರಿಕೆ ಕ್ಷೇತ್ರವನ್ನು ಅಭಿವೃದ್ದಿಪಡಿಸುವ ಸಲುವಾಗಿ ಕೇಂದ್ರ ಸರ್ಕಾರ ರೂ. 10,881 ಕೋಟಿಯ "ಡೈರಿ ಪ್ರೊಸೆಸಿಂಗ್ ಮತ್ತು ಇನ್ಫ್ರಾಸ್ಟ್ರಕ್ಚರ್ ಡೆವಲಪ್ಮೆಂಟ್ ಫಂಡ್ (ಡಿಪಿಐಡಿಎಫ್)" ಸ್ಥಾಪಿಸಿದೆ. ಈ ಹೂಡಿಕೆಯಿಂದ ಸುಮಾರು 50,000 ಗ್ರಾಮಗಳ 95 ಲಕ್ಷ ರೈತರು ಲಾಭ ಪಡೆಯಲಿದ್ದಾರೆ. ಪರಿಣಾಮಕಾರಿ ಹಾಲು ಸಂಗ್ರಹಣಾ ವ್ಯವಸ್ಥೆ ಮತ್ತು ಇತರ ಮೂಲಭೂತ ಸೌಕರ್ಯವನ್ನು ನಿರ್ಮಿಸಲು ಸಾಲವನ್ನು ಒದಗಿಸಲು ನ್ಯಾಷನಲ್ ಡೈರಿ ಡೆವಲಪ್ಮೆಂಟ್



www.karunaduexams.com

ಬೋರ್ಡ್ (ಎನ್‌ಡಿಬಿ) ಮತ್ತು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಸಹಕಾರ (ಎನ್‌ಸಿಡಿಸಿ) ಡಿಪಿಐಡಿಎಫ್ ಅನ್ನು ಬಳಸಿಕೊಳ್ಳಲಿವೆ.

93. ಇತ್ತೀಚೆಗೆ "ಜೊವೊ ಲೌರೆಂಕೊ" ರವರು ಯಾವ ದೇಶದ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ?

ಅ) ಅಂಗೋಲ

ಆ) ಕ್ಯೂಬಾ

ಇ) ಘಾನ

ಈ) ಸೈಪ್ರಸ್

ಅಂಗೋಲ

ಅಂಗೋಲಾದ ಹೊಸ ಅಧ್ಯಕ್ಷರಾಗಿ ಪೀಪಲ್ಸ್ ಮೂವ್ಮೆಂಟ್ ಫಾರ್ ದಿ ಲಿಬರೇಷನ್ ಆಫ್ ಅಂಗೋಲಾ (ಎಂಪಿಎಲ್ಎ) ಪಕ್ಷದ ಮುಖಂಡ ಜೊವೊ ಮ್ಯಾನುಯೆಲ್ ಗೊನ್ಕಾಲ್ವ್ಸ್ ಲೌರೆಂಕೊ ಅಧಿಕೃತವಾಗಿ ಪ್ರಮಾಣವಚನ ಸ್ವೀಕರಿಸಿದರು.

94. ಯಾವ ರಾಜ್ಯ ಗರ್ಭಿಣಿ ಮಹಿಳೆಯರಿಗಾಗಿ "ಶಿಶು ಅಬಾಂಡ್ ಮಾತೃ ಮೃತ್ಯುಹಾರ ಪೂರ್ಣ ನಿರಾಕರಣನ್ ಅಭಿಜನ್ (ಸಂಪೂರ್ಣ) ಯೋಜನೆಯನ್ನು ಪ್ರಾರಂಭಿಸಿದೆ?

ಅ) ಒಡಿಶಾ

ಆ) ತೆಲಂಗಣ

ಇ) ಆಂಧ್ರ ಪ್ರದೇಶ

ಈ) ಜಾರ್ಖಂಡ್

ಒಡಿಶಾ

ಒಡಿಶಾ ಸರ್ಕಾರ ಗರ್ಭಿಣಿ ಮಹಿಳೆಯರಿಗೆ ಶಿಶು ಅಬಾಂಡ್ ಮಾತೃ ಮೃತ್ಯುಹಾರ ಪೂರ್ಣ ನಿರಾಕರಣನ್ ಅಭಿಜನ್ (ಸಂಪೂರ್ಣ) ಯೋಜನೆಯನ್ನು ಪ್ರಾರಂಭಿಸಿದೆ. ಈ ಯೋಜನೆಯಡಿ, ಗರ್ಭಿಣಿ ಮಹಿಳೆಯರಿಗೆ ಆಸ್ಪತ್ರೆಗೆ ಪ್ರಯಾಣಿಸಲು ರಾಜ್ಯ ಸರ್ಕಾರವು ಸಾರಿಗೆ ವೆಚ್ಚ ರೂ .1,000 ಒದಗಿಸುತ್ತದೆ. ಈ ಯೋಜನೆಯ ಪ್ರಮುಖ ಉದ್ದೇಶವೆಂದರೆ ನವಜಾತ ಮಗು ಮತ್ತು ತಾಯಿ ಮರಣ ಪ್ರಮಾಣವನ್ನು ಕಡಿಮೆ ಮಾಡುವುದು.

95. 2017 ಅತ್ಯುತ್ತಮ ಪ್ರವಾಸೋದ್ಯಮ ರಾಜ್ಯ ಪ್ರಶಸ್ತಿ ಯಾವ ರಾಜ್ಯಕ್ಕೆ ಲಭಿಸಿದೆ?

ಅ) ಮಧ್ಯ ಪ್ರದೇಶ

ಆ) ಕೇರಳ

ಇ) ತಮಿಳುನಾಡು

ಈ) ಕರ್ನಾಟಕ

www.karunaduexams.com

ಮಧ್ಯ ಪ್ರದೇಶ

ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಮಧ್ಯಪ್ರದೇಶ ಸರ್ಕಾರ ಒಟ್ಟು 10 ರಾಷ್ಟ್ರೀಯ ಪ್ರವಾಸೋದ್ಯಮ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಸತತ 3 ನೇ ಬಾರಿಗೆ ಅತ್ಯುತ್ತಮ ಪ್ರವಾಸೋದ್ಯಮ ರಾಜ್ಯ ಪ್ರಶಸ್ತಿಯನ್ನು ರಾಜ್ಯವು ಗೆದ್ದುಕೊಂಡಿದೆ.

96. 2017 ಜಾಗತಿಕ ಸ್ಪರ್ಧಾತ್ಮಕ ಸೂಚ್ಯಂಕದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 25

ಆ) 35

ಇ) 40

ಈ) 45

40

2017 ಜಾಗತಿಕ ಸ್ಪರ್ಧಾತ್ಮಕ ಸೂಚ್ಯಂಕದಲ್ಲಿ 137 ದೇಶಗಳ ಪೈಕಿ ಭಾರತ 40 ನೇ ಸ್ಥಾನವನ್ನು ಪಡೆದಿದೆ, ಈ ಸೂಚ್ಯಂಕವನ್ನು ವಿಶ್ವ ಆರ್ಥಿಕ ವೇದಿಕೆ (WEF) ಪ್ರಕಟಿಸಿದೆ. ಸೂಚ್ಯಂಕದ ಪ್ರಕಾರ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದಲ್ಲಿ ವಿಶೇಷವಾಗಿ ಪ್ರತಿ ಬಳಕೆದಾರರಿಗೆ ಇಂಟರ್ನೆಟ್ ಬ್ಯಾಂಡ್ವಿಡ್ತ್, ಮೊಬೈಲ್ ಫೋನ್ ಮತ್ತು ಬ್ರಾಡ್ಬ್ಯಾಂಡ್ ಸಂಪರ್ಕ ಮತ್ತು ಶಾಲೆಗಳಲ್ಲಿ ಅಂತರ್ಜಾಲ ಸೇವೆಯಲ್ಲಿ ಭಾರತದ ಕಾರ್ಯಕ್ಷಮತೆ ಸುಧಾರಣೆಯಾಗಿದೆ. ಈ ಪಟ್ಟಿಯಲ್ಲಿ ಸ್ವಿಟ್ಜರ್ಲೆಂಡ್ ಅಗ್ರಸ್ಥಾನದಲ್ಲಿದೆ, ನಂತರ ಯುನೈಟೆಡ್ ಸ್ಟೇಟ್ಸ್, ಸಿಂಗಪೂರ್, ನೆದರ್ಲ್ಯಾಂಡ್ಸ್ ಮತ್ತು ಜರ್ಮನಿ ಸ್ಥಾನ ಪಡೆದುಕೊಂಡಿವೆ.

97. ಈ ಕೆಳಗಿನ ಯಾವ ರಾಜ್ಯ "3ನೇ ಭಾರತ ಅಂತರಾಷ್ಟ್ರೀಯ ವಿಜ್ಞಾನ ಉತ್ಸವ -2017" ಆಯೋಜಿಸುತ್ತಿದೆ?

ಅ) ಗೋವಾ

ಆ) ಮಹಾರಾಷ್ಟ್ರ

ಇ) ತಮಿಳುನಾಡು

ಈ) ಗುಜರಾತ್

ತಮಿಳುನಾಡು

3 ನೇ ಭಾರತ ಅಂತರಾಷ್ಟ್ರೀಯ ವಿಜ್ಞಾನ ಉತ್ಸವ (ಐಐಎಸ್ಎಫ್ -2017) ತಮಿಳುನಾಡಿನ ಚೆನ್ನೈನಲ್ಲಿ ಅಕ್ಟೋಬರ್ 13 ರಿಂದ 16 ರವರೆಗೆ ನಡೆಯಲಿದೆ. ಈ ಉತ್ಸವವನ್ನು ಭೂ ವಿಜ್ಞಾನ ಸಚಿವಾಲಯ (MoES) ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ (MoST) ಆಯೋಜಿಸಿದೆ.

www.karunaduexams.com

98. ಇತ್ತೀಚೆಗೆ ನಿಧನರಾದ ಹಿರಿಯ ನಟ, ನಿರ್ದೇಶಕ ಟಾಮ್ ಆಲ್ಟರ್ ರವರು ಯಾವ ದೇಶದವರು?

ಅ) ಭಾರತ

ಆ) ರಷ್ಯಾ

ಇ) ಫ್ರಾನ್ಸ್

ಈ) ಜಪಾನ್

ಭಾರತ

ಪದ್ಮ ಶ್ರೀ ಪ್ರಶಸ್ತಿ ಪುರಸ್ಕೃತ ಹಿರಿಯ ನಟ, ನಿರ್ದೇಶಕ ಟಾಮ್ ಆಲ್ಟರ್ ನಿಧನರಾಗಿದ್ದಾರೆ. ಅಮೆರಿಕ ಮೂಲದ ಭಾರತೀಯ ನಟ ಟಾಮ್ ಆಲ್ಟರ್ ಅವರು ಕಲೆ ಮತ್ತು ಸಿನಿಮಾ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಆಧಾರಿಸಿ ಭಾರತ ಸರ್ಕಾರ 2008ರಲ್ಲಿ ಪದ್ಮ ಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.

99. 14ನೇ ಭಾರತ- ಐರೋಪ್ಯ ಒಕ್ಕೂಟ ಶೃಂಗಸಭೆ 2017 ಆತಿಥ್ಯ ವಹಿಸಲಿರುವ ನಗರ ________?

ಅ) ಬ್ರುಸೆಲ್

ಆ) ನವದೆಹಲಿ

ಇ) ಹೈದ್ರಾಬಾದ್

ಈ) ಹಂಬರ್ಗ್

ನವದೆಹಲಿ

14ನೇ ಭಾರತ-ಇಯು ಶೃಂಗಸಭೆ ಅಕ್ಟೋಬರ್ 5-7, 2017 ರಂದು ನವದೆಹಲಿಯಲ್ಲಿ ನಡೆಯಲಿದೆ. ಶೃಂಗಸಭೆಯಲ್ಲಿ, ದೀರ್ಘಾವಧಿಯ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಅಡಚಣೆಯನ್ನು ನಿವಾರಿಸುವ ಮಾರ್ಗಗಳು ಸೇರಿದಂತೆ ಎರಡೂ ಕಡೆ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲು ನಿರೀಕ್ಷಿಸಲಾಗಿದೆ. ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷ (ಇಸಿ) ಡೊನಾಲ್ಡ್ ಫ್ರಾನ್ಸಿಜೆಕ್ ಟಸ್ಕ್ ಮತ್ತು ಯುರೋಪಿಯನ್ ಕಮಿಷನ್ (ಇಸಿ) ಅಧ್ಯಕ್ಷ ಜೀನ್-ಕ್ಲೌಡ್ ಜಂಕರ್ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

100. ಆರ್ಥಿಕ ಕಾರ್ಯಕ್ಷಮತೆಯನ್ನು ಸುಧಾರಿಸುವ ಸಲುವಾಗಿ ಯಾವ ಬ್ಯಾಂಕ್ 'ಪ್ರಾಜೆಕ್ಟ್ ನಿಶ್ಚಯ್' ಅನ್ನು ಪ್ರಾರಂಭಿಸಿದೆ?

ಅ) ICICI

ಆ) IDBI

ಇ) SBI

ಈ) Axis

IDBI

www.karunaduexams.com

ಆರ್ಥಿಕ ಕಾರ್ಯಕ್ಷಮತೆಯನ್ನು ಸುಧಾರಿಸಲು ಬಾಡಿನ್ ಕನ್ಸಲ್ಟಿಂಗ್ ಗ್ರೂಪ್ (ಬಿ.ಸಿ.ಜಿ.) ಸಹಯೋಗದೊಂದಿಗೆ ಐಡಿಬಿಐ ಬ್ಯಾಂಕ್ 'ಪ್ರಾಜೆಕ್ಟ್ ನಿಶ್ಚಯ್" ಅನ್ನು ಆರಂಭಿಸಿದೆ.

www.karunaduexams.com